
ಜನಪದ ಸೇವಕ

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೬ ಫೆಬ್ರವರಿ-೨೦೦೬ ಸಂಚಿಕೆ-೭



ಜಾಗತೀಕರಣದ ಆರೋಹಣ ಮೌಲ್ಯಗಳ ಅವರೋಹಣ !

ಜನಪದ ವಿಚಾರದಲ್ಲಿ

ಫೆಬ್ರವರಿ-೨೦೦೬.

ಜನಪದ ವಿಚಾರ
ತಿಂಗಳ ವೈಚಾರಿಕ ಡೈಜೆಸ್ಟ್

ಫೆಬ್ರವರಿ–೨೦೦೬
ಸಂಪುಟ–೬
ಸಂಚಿಕೆ–೭

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ–೫೭೧ ೪೩೧
ಮಂಡ್ಯ ಜಿಲ್ಲೆ

✆(08236)298754
e-mail-janapada@yahoo.com
www.janapada.org

ಗೋಮಟೇಶ್ವರ

ನರನಾಗಿರ್ದೊಡದೆಂ ನರಾಧಿಪತಿಯುಂ
ತಾನಾದೊಡೇನೀ ವಸುಂ
ಧರೆಯೊಳ್ ತೃಷ್ಣೆಯ ಪಾಶಮಂ ಪರಿದು
ಕರ್ಮಾವರ್ತಮಂ ದಾಂಟಿ
ಜೀವರಿಗೆಲ್ಲಂ ಶಮ ದೀಕ್ಷೆಯಂ
ಕರುಣಿಪಾ ನಿನ್ನಂದದೌನ್ನತ್ಯದಿಂ
ಮೆರೆವಾ ಸಂಯಮಿಯೊರ್ವನೇ
ಕೃತಿಯಲ್ತೆ ಶ್ರೀಗೋಮಟಾಧೀಶ್ವರಾ
ಜಗದೊಳ್ ಜೀವಿಸವೇಳ್ಕುಮೆಂಬುದು
ಚಿತಂ ಜೀವಿಪ್ಪ ಸಂರಂಭದೊಳ್
ಸೊಗಮಂ ಸಾಧಿಸಮೇಳ್ಕು
ಮೆಂಬುದುಚಿತಂ
ತತ್ಸಾಧನೋದ್ಯೋಗದೊಳ್
ಪಗೆಯಂ ಗೆಲ್ಲಲೆವೇಳ್ಕುಮೆಂಬುದು
ಚಿತಂ ನ್ಯಾಯಂಗಳಿಂತಿರ್ದೊಡಂ
ಬಗೆಯಲ್ ವಾಂಛೆಯ ಗೆಲ್ವುದೇ
ಸುಖಮಲ್ತೆ ಶ್ರೀ ಗೋಮಟಾಧೀಶ್ವರಾ
ಭೋಗಾಪೇಕ್ಷೆಯ ನೀಗಿಯುಂ
ಮುದಿತ ದೀಪ್ತಸ್ವಾಂತನಾಗಿರ್ದು ಮೇಣ್
ರಾಗ ದ್ವೇಷ ಗಣಂಗಳಂ
ತೊರೆದೊಡಂ ತಾಳಿರ್ದು ಸನ್ಮೈತ್ರಿಯಂ
ತ್ಯಾಗಾವಸ್ಥಿತನಾದೊಡಂ
ಜನತೆಯಂ ನಿನ್ನಂತೆ ಸಂತೈಸುವಾ
ಯೋಗಿಶ್ರೇಷ್ಠನೆ ಧನ್ಯನಲ್ತೆ
ಭುವಿಯೊಳ್ ಶ್ರೀ ಗೋಮಟಾಧೀಶ್ವರಾ

– ಡಿ.ವಿ.ಜಿ

ವಿಚಾರ ದೀಪ್ತಿ

'ಸಾಮಾಜಿಕ ಜವಾಬ್ದಾರಿ ಇರುವ ಚಿಂತಕರು, ಬರಹಗಾರರು ಪ್ರತಿ ನಿತ್ಯದ ವಿದ್ಯಮಾನಗಳ ಬಗ್ಗೆ ಚಿಂತನೆಗಳನ್ನು ಹಂಚಿಕೊಳ್ಳದೆ ಮೌನ ವಹಿಸುತ್ತಾರೆ. ಇಂತಹ ಸಾಮಾಜಿಕ ಮೌನ ಆತಂಕಕಾರಿ'.

'ಇತ್ತೀಚಿನ ದಿನಗಳಲ್ಲಿ ಸಾಹಿತ್ಯದ ಕುರಿತು ಚರ್ಚೆ ಮಾಡುವುದಕ್ಕಿಂತ ಸಾಹಿತಿಗಳ ಜಗಳವೇ ಹೆಚ್ಚಾಗಿದೆ. ಇಂತಹ ವೈಯಕ್ತಿಕ ಜಗಳಗಳಲ್ಲಿ ಮೌನ ವಹಿಸಿದರೂ ತೀರಾ ಮುಖ್ಯ ಸಂದರ್ಭಗಳಲ್ಲಿನ ಮೌನ ಆಘಾತಕಾರಿ. ಆದ್ದರಿಂದ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭಗಳಲ್ಲಿ ಲೇಖಕರು, ಚಿಂತಕರು ಮೌನ ಮುರಿಯಬೇಕು' 'ಧರ್ಮ ಮತ್ತು ಮತದ ಅಪವ್ಯಾಖ್ಯಾನ ಹಾಗೂ ತಪ್ಪು ಆದ್ಯತೆ ನಮ್ಮನ್ನು ಆಳುತ್ತಿರುವ ಈ ಸಂದರ್ಭದಲ್ಲಿ ಸಾಮಾಜಿಕ ಕಳಕಳಿಯುಳ್ಳ ಮಂದಿ ಸಮಾಜಮುಖಿ ಚಿಂತನೆ ನಡೆಸಬೇಕು'

'ಎಪ್ಪತ್ತರ ದಶಕದಲ್ಲಿ ಮಾನವೀಯ ಮೌಲ್ಯವುಳ್ಳ ಸಾಮಾಜಿಕ ವಿವೇಕ ಆಳಿದರೆ ೯೦ರ ದಶಕದಲ್ಲಿ ಆರ್ಥಿಕ ಅಸಹಾಯಕತೆ ನಮ್ಮನ್ನಾಳತೊಡಗಿತು. ಇದರ ಪರಿಣಾಮವಾಗಿ, ೭೦ರ ಆತ್ಮ ವಿಶ್ವಾಸದ ದಶಕ ಕಳೆದುಕೊಂಡು ಅಸಹಾಯಕತೆಯ ೯೦ರ ದಶಕಕ್ಕೆ ಕಾಲಿರಿಸಿದೆವು. ಈ ರೀತಿ ಆತ್ಮವಿಶ್ವಾಸದಿಂದ ಆರ್ಥಿಕ ಅಸಹಾಯಕತೆಯ ಕಡೆಗೆ ಸಾಗಿದ್ದೇ ಒಂದು ವ್ಯಂಗ್ಯ. ಈಗ ೨೧ನೇ ಶತಮಾನದಲ್ಲಿ ಎಲ್ಲರೂ ಶರಣಾಗತಿಯ ಕಡೆಗೆ ಸಾಗುತ್ತಿದ್ದೇವೆ'.

'ನಮ್ಮನ್ನು ಒಂದೆಡೆ ಅಕ್ಷರದ ಅಹಂಕಾರ ಮತ್ತೊಂದೆಡೆ ಆರ್ಥಿಕ ಅಹಂಕಾರ ಆಳುತ್ತಿದೆ. ಆತ್ಮವಿಶ್ವಾಸ ಗಳಿಕೆಗೆ ನಾಂದಿಯಾಗಬೇಕಾದ ಅಕ್ಷರ, ಅಹಂಕಾರಕ್ಕೆ ಪ್ರೇರಣೆಯಾದುದು ದುರಂತ. ಇದರಿಂದಾಗಿ ವಿದ್ಯಾವಂತ ಅನಕ್ಷರಸ್ಥರ ಸಂಖ್ಯೆ ಹೆಚ್ಚಾಗಿದೆ'.

'ಬರೆಯುವ ಬರಹಗಾರರು ಬರೆಯದ ಬರಹಗಾರರನ್ನು ತುಚ್ಛವಾಗಿ ಕಾಣುತ್ತಾರೆ. ಎದೆಯಲ್ಲಿ ಕಟ್ಟಿಕೊಂಡ ಕಾವ್ಯವನ್ನು ಪ್ರಕಟಿಸಲಾಗದ 'ಬರೆಯದ ಬರಹಗಾರ'ರ ಕಡೆಗೆ 'ಬರೆಯುವ ಬರಹಗಾರ'ರು ಅಂತಃಕರಣದಿಂದ ನೋಡಿದಾಗಲಷ್ಟೇ ಅವರು ಬರಹಗಾರರೆನಿಸಿಕೊಳ್ಳುತ್ತಾರೆ'.

–ಬರಗೂರು ರಾಮಚಂದ್ರಪ್ಪ.

ಜಾಗತೀಕರಣದ ಆರೋಹಣ ಮೌಲ್ಯಗಳ ಅವರೋಹಣ !

-ಸುರೇಂದ್ರ ಕೌಲಗಿ

ಇತ್ತೀಚಿನ ದಿನಗಳಲ್ಲಿ ಜನರಿಗೆ ಪ್ರತಿಯೊಂದರ ಬೆಲೆ ಗೊತ್ತಿದೆ. ಆದರೆ ಯಾವೊಂದರ ಮೌಲ್ಯ ಮಾತ್ರ ಗೊತ್ತಿಲ್ಲ. *-ಆಸ್ಕರ್ ವೈಲ್ಡ್*

ಜಾಗತೀಕರಣ ತನ್ನ ಪರಾಕಾಷ್ಠತೆಯನ್ನು ತಲುಪಿ ಮಾನವೀಯ ಮೌಲ್ಯಗಳು ನಾಶವಾಗುತ್ತಿರುವ ಈ ೨೧ನೇ ಶತಮಾನದ ಆರಂಭದಲ್ಲಿ ಶ್ರವಣಬೆಳಗೊಳದಲ್ಲಿ ಗೊಮ್ಮಟೇಶ್ವರನಿಗೆ ಮೊದಲ ಮಹಾಮಸ್ತಕಾಭಿಷೇಕ ಇದೇ ಫೆಬ್ರವರಿ ೮ ರಿಂದ ನಡೆಯುತ್ತಿರುವುದು ವಿಶೇಷ ಅರ್ಥದಿಂದ ಕೂಡಿದೆ. ಗೊಮ್ಮಟೇಶ್ವರ ಕೇವಲ ಒಂದು ಸುಂದರ ಶಿಲಾಮೂರ್ತಿಯಾಗಿರದೆ ಜೀವನದ ಬಹು ದೊಡ್ಡ ಮೌಲ್ಯಗಳಾದ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ, ವೈರಾಗ್ಯ ಮುಂತಾದವುಗಳ ಸಂಕೇತವೂ ಆಗಿದೆ. ಗೊಮ್ಮಟೇಶ್ವರ ಈ ಮೌಲ್ಯಗಳನ್ನು ಏಕೀಭವಿಸಿಕೊಂಡು ವಿಗ್ರಹದ ರೂಪದಲ್ಲಿ ಕಳೆದ ಒಂದು ಸಾವಿರ ವರ್ಷಗಳಿಂದ ಮಗುವಿನ ಮೊಗದಲ್ಲಿಯಂಥ ಮುಗ್ಧ ಮುಗುಳ್ನಗೆಯ ಮೂಲಕ ಸಾರುತ್ತಿದ್ದಾನೆ. ಅವನನ್ನು ನೋಡಿದವರೆಲ್ಲ ಪಂಡಿತರೆ ಆಗಿರಲಿ, ಪಾಮರರೆ ಆಗಿರಲಿ, ಐಶ್ವರ್ಯವಂತರಾಗಿರಲಿ, ಭಿಕ್ಷುಕರಾಗಿರಲಿ ಅವನು ಸಾರುತ್ತಿರುವ ಮೌಲ್ಯಗಳಿಂದ ಪ್ರಭಾವಿತರಾಗದೆ ಉಳಿದಿಲ್ಲ. ಮಹಾವೀರನು ವಿಗ್ರಹವಾಗಿ ನಿಂತಾದ ಮೇಲೆ ನಮ್ಮ ದೇಶದ ಚರಿತ್ರೆಯಲ್ಲಿ, ಪ್ರಪಂಚದ ಚರಿತ್ರೆಯಲ್ಲಿ ಬಹಳಷ್ಟು ಘಟನೆಗಳು ನಡೆದು ಹೋಗಿವೆ. ಅವೆಲ್ಲಕ್ಕೂ ಸಾಕ್ಷಿಯಾಗಿ ಸ್ಥಿತಪ್ರಜ್ಞನಾಗಿ ಗೊಮ್ಮಟೇಶ್ವರ ನಿಂತಿದ್ದಾನೆ ಮತ್ತು ಅದೇ ಮುಗುಳ್ನಗುವನ್ನು ತನ್ನ ಮುಖದ ಮೇಲೆ ಹೊಂದಿದ್ದಾನೆ. ಎರಡು ಮಹಾಯುದ್ಧಗಳಾದವು. ಈ ಎರಡು ಯುದ್ಧಗಳ ಕಾಲದಲ್ಲಿ ಸತ್ತವರ ಸಂಖ್ಯೆ ಕೋಟ್ಯಾವಧಿ. ಆ ಯುದ್ಧಗಳ ದುಷ್ಪರಿಣಾಮದಿಂದ ಪ್ರಭಾವಿತನಾಗದೆ ಯಾವವ್ಯಕ್ತಿಯೂ ಉಳಿಯಲಿಲ್ಲ. ಅಂಥ ಭೀಕರ ಯುದ್ಧಗಳ ನಂತರವೂ ಮನುಷ್ಯ ಯುದ್ಧದ ವಿಚಾರದಿಂದ ಮಾತ್ರ ದೂರ ಸರಿಯಲಿಲ್ಲ. ಬದಲಿಗೆ ಇನ್ನೂ ಹೆಚ್ಚಿನ ಯುದ್ಧಗಳಿಗಾಗಿ ಸಿದ್ಧತೆ ಮಾಡಿಕೊಳ್ಳತೊಡಗಿದ, ಕೇವಲ ಭೂಮಿಯ ಮೇಲಷ್ಟೆ ಅಲ್ಲ, ಅಂತರಿಕ್ಷದಲ್ಲೂ ಯುದ್ಧ ಮಾಡುವ ತಂತ್ರವನ್ನು ಬೆಳಸಿಕೊಂಡ. ಮೂರನೇ ಮಹಾಯುದ್ಧದ ರೂಪವಾಗಿ ಜಗತ್ತಿನತುಂಬಾ ಬಿಡಿಬಿಡಿಯಾಗಿ ಅಹರ್ನಿಶಿ ವರ್ಷವಿಡಿ ನಿರಂತರ ಯುದ್ಧ ನಡೆಸುತ್ತಲೇ ಬಂದಿದ್ದಾನೆ ಇಂಥ ಅಘೋಷಿತ ಮತ್ತು ಕಣ್ಣುಮುಚ್ಚಾಲೆಯ ಯುದ್ಧಗಳ ಆಟದಲ್ಲಿ ಸಾಯುವವರ ಸಂಖ್ಯೆಗೆ ಮಿತಿಯೇ ಇಲ್ಲ. ಮೊದಲಿನ ಯುದ್ಧಗಳಿಗೆ ವಸಾಹತುಶಾಹಿಯ ಸ್ಥಾಪನೆ ಉದ್ದೇಶವಾಗಿತ್ತು. ವಸಾಹತುಗಳ ಸ್ಥಾಪನೆಯ ಹಿಂದೆ ತೀವ್ರತಮವಾದ ಆರ್ಥಿಕ ಮತ್ತು ರಾಜಕೀಯ ಸ್ವಾರ್ಥ ಇತ್ತು. ಆ ಮಹಾಯುದ್ಧಗಳು ಇತಿಹಾಸದಲ್ಲಿ ಸೇರಿ ೬೦ ವರ್ಷಗಳಾದ ಮೇಲೂ ವಸಾಹತುಶಾಹಿ ಮನೋಭಾವ ಜಗತ್ತಿನ ಎಲ್ಲ ಸಣ್ಣಪುಟ್ಟ ದೇಶಗಳ

ನಾಯಕರ ಮನಸ್ಸಿನಲ್ಲಿ ಇಂದಿಗೂ ಸಕ್ರಿಯವಾಗಿಯೆ ಕೆಲಸಮಾಡುತ್ತಿದೆ. ವಸಾಹತುಶಾಹಿಗೆ ಕುಮ್ಮಕ್ಕು ಕೊಡಲೆಂಬ ಉದ್ದೇಶ್ಯಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಬೆಳಸಲಾಯಿತು. ಇವು ಮನುಷ್ಯನನ್ನು, ದೇಶಗಳನ್ನು ಇನ್ನಷ್ಟು ಪ್ರಾಪಂಚಿಕ ಮೋಹದಲ್ಲಿ ಬಂಧಿಸಿದವು. ಮಹಾವೀರ ಭೋಧಿಸದ್ದ ಅಹಿಂಸೆಯ ಬದಲಿಗೆ ಹಿಂಸೆ ಹೆಚ್ಚಾಯಿತು, ಸತ್ಯ ಉಳಿಯಬೇಕಿದ್ದ ಕಡೆ ಅಸತ್ಯ ಉಳಿಯಿತು, ಪ್ರಾಮಾಣಿಕತೆ ತಲೆಮರೆಸಿಕೊಂಡು ಹೋಯಿತು. ವ್ಯಕ್ತಿಜೀವನ ಮತ್ತು ರಾಷ್ಟ್ರಜೀವನದ ಪ್ರತಿಯೊಂದು ಚಟುವಟಿಕೆಯಲ್ಲೂ ಅಪ್ರಾಮಣಿಕತೆ ಬೆರೆತುಕೊಂಡಿತು ಬ್ರಹ್ಮಚರ್ಯ ಪಾಲನೆ ಎಂದರೇನು ಎಂದು ಕೇಳುವ ಸ್ಥಿತಿ ಉಂಟಾಯಿತು. ಇದರ ಪರಿಣಾಮವಾಗಿ ಸ್ವೇಚ್ಛಾ ಲೈಂಗಿಕತೆಯಿಂದ ಜಗತ್ತಿನಾದ್ಯಂತ ಏಯ್ಡ್ಸ್ ಹಬ್ಬಿತು. ಪ್ರಕೃತಿಯನ್ನೆ ಬೆತ್ತಲೆ ಮಾಡುವಷ್ಟರ ಮಟ್ಟಿಗೆ ಮನುಷ್ಯ ಮತ್ತು ರಾಷ್ಟ್ರಗಳಲ್ಲಿ ಸಂಗ್ರಹದ ಬುದ್ಧಿ ಬೆಳೆಯಿತು. ಇವೆಲ್ಲ ಬದಲಾವಣೆಗಳನ್ನು ನೋಡುತ್ತಾ ಗೊಮ್ಮಟೇಶ್ವರ ತನ್ನದೆ ವಿಶಿಷ್ಟ ಶೈಲಿಯ ಮುಗುಳ್ನಗೆ ಬೀರುತ್ತಿದ್ದಾನೆ. ಈ ನಗೆಯ ಅರ್ಥವನ್ನು ತಮ್ಮತಮ್ಮದೆ ಆದ ರೀತಿಯಲ್ಲಿ ಮಾಡಿಕೊಳ್ಳಲು ಎಲ್ಲರೂ ಸ್ವತಂತ್ರರು. ಈ ಮುಗುಳ್ನಗೆಯನ್ನು ನೋಡದೆ ಇರುವವರೂ ಕೂಡ ಇರಬಹುದು! ಕೆಲವರು ಈ ನಗು ಗೊಮ್ಮಟೇಶ್ವರ ಮನುಕುಲದ ಮೇಲೆ ಬೀರುತ್ತಿರುವ ಅನುಕಂಪದ ನಗೆಯೆಂದು ಭಾವಿಸಬಹುದು. ಇನ್ನು ಕೆಲವರು 'ಅಯ್ಯೋ ಪಾಪ' ಎಂದು ಸೂಚಿಸುವ ನಗುವೆಂದು ತಿಳಿಯಬಹುದು. ಯಾವ ರೀತಿಯಲ್ಲೇ ಆ ನಗುವನ್ನು ಅರ್ಥೈಸಲಿ. ಒಂದು ಅರ್ಥ ಮಾತ್ರ ಇಂದಿನ ಮಾನವಕುಲಕ್ಕೆ ತಿಳಿಯದೆ ಹೋಗಬಹುದು. ಯಾವ ಭೋಗಜೀವನದ ಹಿಂದೆ ಮಾನವಕುಲ ಓಡುತ್ತಿದೆಯೊ ಅದು ಶುದ್ಧ ತಪ್ಪು, ಮೂರ್ಖತನ, ಅಪಾಯಕಾರಿ ಎಂದು ಸಾರುತ್ತಿರುವ ಆ ಮುಗುಳ್ನುಗೆಯ ಹಿಂದಿರುವ ವ್ಯಂಗ್ಯದ ಅರ್ಥ.

ಗೊಮ್ಮಟೇಶ್ವರನ ಮಹಾಮಸ್ತಾಭಿಷೇಕವು ಎಲ್ಲ ಪ್ರಕಾರದ ಅಭಿಷೇಕಗಳಲ್ಲಿಯೇ ಉತ್ತುಂಗವಾದದು. ಇಂಥ ಮಹಾಮಜ್ಜನದಂಥ ಘಟನೆ ವಿಶ್ವದಲ್ಲಿ ಎಲ್ಲಿಯೂ ನಡೆಯುವುದಿಲ್ಲ. ಮಹಾಭಿಷೇಕ ನಡೆದಾಗಲೆಲ್ಲ ೧೨ ವರ್ಷಗಳ ಕಾಲ ಗತಿಸಿರುತ್ತದೆ. ಮಾನವನ ಜೀವನದಲ್ಲಿ ೧೨ ವರ್ಷಗಳೆಂಬುದೇನೂ ಅಲ್ಪ ಸಮಯವಲ್ಲ. ಒಂದು ಮಸ್ತಾಭಿಷೇಕದಿಂದ ಇನ್ನೊಂದು ಮಸ್ತಾಭಿಷೇಕದ ವೇಳೆಗೆ ಏನೆಲ್ಲ ಏರುಪೇರುಗಳು ಪ್ರಕೃತಿಯಲ್ಲೂ, ಮಾನವಸಮಾಜದಲ್ಲೂ, ಮಾನಸದಲ್ಲೂ ನಡೆದುಹೋಗಿರುತ್ತದೆ. ಅಸಂಖ್ಯಾತ ತಪ್ಪು ನೆಪ್ಪುಗಳಾಗಿರುತ್ತದೆ. ತನ್ನ ಜೀವನದಲ್ಲಿ ಆಗಿಹೋದ ಘಟನೆಗಳನ್ನು ಮನುಷ್ಯ ಪುನಃ ನೋಡಲಾರ, ಅನುಭವಿಸಲಾರ. ಅಲ್ಲಿಗೆ ಅದೇ ಮೊದಲು, ಅದೇ ಕೊನೆ. ಎಲ್ಲವೂ ಇತಿಹಾಸ. ಆದರೆ ಮಸ್ತಾಭಿಷೇಕ ಒಂದು ವಿಷಯಕ್ಕೆ ಆಸ್ಪದ ಕೊಡುತ್ತದೆ ಅದು ಆತ್ಮಪರೀಕ್ಷೆಯ ಅವಕಾಶ. ಕಳೆದು ಹೋದ ೧೨ ವರ್ಷಗಳಲ್ಲಿ ತಾನು ಸಾಧಿಸಿದ್ದೇನು, ಕಳೆದದ್ದೇನು ಎಂಬ ವಿಷಯವಾಗಿ ಆತ್ಮಪರೀಕ್ಷೆ ಮಾಡಿಕೊಳ್ಳುವ ಅವಕಾಶ. ಈ ದೃಷ್ಟಿಯಿಂದ ನೋಡಿದರೆ ಈಗ ೨೦೦೬ರ ಫೆಬ್ರವರಿ ೮ ರಿಂದ ನಡೆಯುವ ಮಹಾಮಸ್ತಾಭಿಷೇಕವು ಉದಾರೀಕರಣ,

ಮುಕ್ತ ಮಾರುಕಟ್ಟೆ, ಮಾಹಿತಿ ತಂತ್ರಜ್ಞಾನ ಮುಂತಾದವುಗಳ ಸೆರಗಿನಲ್ಲಿ ತಾರತಮ್ಯತೆಯಿಂದಲೂ, ಹಿಂಸಾಭಾವನೆಯಿಂದಲೂ ಕೂಡಿದ ಮಾನವೀಯತೆರಹಿತ ಜಾಗತೀಕರಣವೆಂಬ ಹೊಸ ಸಮಾಜದ ಸ್ಥಾಪನೆಯ ಪ್ರಯತ್ನ ಎಷ್ಟು ಸಾಧುವಾದುದು, ಎಷ್ಟು ಅಸಾಧುವಾದುದು ಎಂಬ ವಿಚಾರವಾಗಿ ಆಲೋಚಿಸಲು ಅವಕಾಶವನ್ನೀಯುತ್ತದೆ. ಜಾಗತೀಕರಣದಿಂದ ಪ್ರತಿಯೊಂದು ದೇಶದ ಪ್ರತಿಯೊಂದು ಸಮಾಜದಲ್ಲಿ ಆರ್ಥಿಕ ಅಸಮಾನತೆಯೊಂದಿಗೆ ಹಿಂಸೆ ಮತ್ತು ಅಶಾಂತಿ ಉಂಟಾಯಿತು. ಅವಕಾಶವಂಚಿತರ ಸಂಖ್ಯೆ ಹೆಚ್ಚಾಯಿತು. ಬಡವಬಲ್ಲಿದರ ಮಧ್ಯದ ಅಂತರ ವಿಸ್ತಾರಗೊಂಡಿತು. ನಿರುದ್ಯೋಗ ಸಮಸ್ಯೆ ಪ್ರಮುಖವಾಯಿತು. ಆಹಾರದ ಉತ್ಪಾದನೆಗಾಗಿ ಹಣವನ್ನು ಖರ್ಚು ಮಾಡುವುದಕ್ಕಿಂತ ಮದ್ದು ಗುಂಡುಗಳ ತಯಾರಿಕೆಗಾಗಿ ಹೆಚ್ಚು ಹಣವನ್ನು ಖರ್ಚುಮಾಡುವಂತಾಯಿತು. ಜಗತ್ತಿನ ಎಲ್ಲ ದೇಶಗಳು ಶ್ರೀಮಂತ ರಾಷ್ಟ್ರಗಳ ಹಣದ ಪಾಶಕ್ಕೆ ಸಿಕ್ಕಿಕೊಂಡವು. ಇಂದು ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಯ ತಲೆಯ ಮೇಲೆ ತನ್ನ ದೇಶದ ಸಾಲದ ಹೊರೆಯಿದೆ. ಜಾಗತೀಕರಣದಿಂದ ಜಗತ್ತು ಒಂದು ಗ್ರಾಮವಾಗಿ ಪರಿಣಮಿಸಿದೆ ಎಂದು ಹೇಳಲಾಗುತ್ತಿದೆ ಆದರೆ ಜಗತ್ತು ಒಂದು ಗ್ರಾಮವಾಗುವುದಿರಲಿ ಅನೇಕ ವಿಭಾಗಗಳಲ್ಲಿ ವಿಭಜಿಸಿ ಹೋಗಿದೆ. ಮುಂದುವರಿದ, ಮುಂದುವರಿಯುತ್ತಿರುವ, ಮುಂದುವರೆಯದೆ ಇರುವ ದೇಶಗಳಾಗಿ ವಿಭಜಿತಗೊಂಡಿದೆ. ಪರಿಣಾಮವಾಗಿ ಜಾಗತೀಕರಣದ ಹೆಸರಿನಲ್ಲಿ ಅರಣ್ಯನೀತಿ ಜಾರಿಗೆ ಬಂದಿದೆ. ಅಂದರೆ ಬಲವಿದ್ದವನು ಬದುಕಬಹುದೆಂಬ ನೀತಿ, ದೊಡ್ಡಮೀನು ಚಿಕ್ಕ ಮೀನನ್ನು ತಿನ್ನುವ ನೀತಿ. ಭೂಮಿಯ ಮೇಲೆ ಒಡೆತನ ಸ್ಥಾಪಿಸಿಕೊಳ್ಳಬೇಕೆನ್ನುವ ಸ್ಪರ್ಧೆ ಆಕಾಶಕ್ಕೂ, ಗ್ರಹಗಳಿಗೂ ವಿಸ್ತರಿಸಿದೆ. ಭವಿಷ್ಯದಲ್ಲೆನಾದರೂ ಯುದ್ಧ ಸಂಭವಿಸದಲ್ಲಿ ಅದು ಭೂಮಿಯ ಮೇಲಿನ ಇಡೀ ಜೀವ ಸಂಕುಲವನ್ನೇ ನಾಶ ಮಾಡುತ್ತದೆ. ಜಾಗತೀಕರಣದ ವಿಚಾರ ಇಂದು ಮಾನವನನ್ನು ತಲ್ಲಣಗೊಳಿಸುತ್ತಿದೆ ಜಗತ್ತಿನಾದ್ಯಂತ ಜಾಗತೀಕರಣದ ವಿರುದ್ಧ ಪ್ರತಿಭಟನೆಗಳ ನಡೆಯುತ್ತಿವೆ. ಹೀಗೆ ಜಾಗತೀಕರಣದ ಆರೋಹಣವಾಗುತ್ತಾ ಹೋದಂತೆ ಮಾನವೀಯ ಮೌಲ್ಯಗಳ ಅವರೋಹಣವೂ ಆಗುತ್ತಿದೆ. ಇದರ ಅನುಭವ ವಿಶ್ವದ ಮುಂದುವರಿದ ರಾಷ್ಟ್ರಗಳ ಜನರಿಗೆ ಆಗದೆ ಹೋಗುತ್ತಿರಬಹುದು, ಹಿಂದುಳಿದ ಮತ್ತು ಅಭಿವೃದ್ಧಿಯತ್ತ ಸಾಗುತ್ತಿರುವ ರಾಷ್ಟ್ರಗಳಲ್ಲಿಯ ಜನರಿಗಂತೂ ಆಗುತ್ತಿದೆ. ಗೊಮ್ಮಟೇಶ್ವರನ ಮಹಾಮಸ್ತಾಭಿಷೇಕದ ಕಾಲದಲ್ಲಿ ಮಹಾವೀರನು ಸಾರಿದ್ದ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ, ವೈರಾಗ್ಯ ಮುಂತಾದ ಮಾನವೀಯ ಮೌಲ್ಯಗಳು ಪುನ: ಜಗತ್ತಿನಾದ್ಯಂತ ಪಸರಿಸಿ ಜಾಗತೀಕರಣಕ್ಕೆ ಮಾನವೀಯ ಮೌಲ್ಯಗಳನ್ನು ತರುವುದರ ಮೂಲಕ ಜಾಗತೀಕರಣವು ಜಗತ್ತಿಗೆ ಶಾಪವಾಗುವುದರ ಬದಲು ವರವಾಗಲೆಂದು ಹಾರೈಸಬೇಕಾದುದು ಪ್ರತಿಯೊಬ್ಬರ ಕರ್ತವ್ಯ ಮತ್ತು ಧರ್ಮ ಕೂಡ.

* * *

ಸರ್ವೋದಯ ಪಥಿಕ ಜಿ.ವಿ.ನಾರಾಯಣಮೂರ್ತಿ

-ಸಿ.ಎಸ್.ಕೃಷ್ಣರಾವ್

"ಚಿಕ್ಕನಾಯಕನಹಳ್ಳಿಯಲ್ಲಿ ನನ್ನ ಬದುಕು ಅಲ್ಲಿನ ಇತಿಹಾಸದಲ್ಲಿ ಲೀನವಾಯಿತು ಅದೊಂದುಪಳೆಯುಳಿಕೆ ಆಯಿತು."

ಚಿಕ್ಕನಾಯಕನಹಳ್ಳಿಯಲ್ಲೇ ನಾನು ಅಂತಿಮ ಉಸಿರು ಎಳೆಯುವಂತಾಗಿದ್ದರೆ. ಚೆನ್ನಾಗಿರುತ್ತಿತ್ತೇನೋ! ಆದರೆ ದೈವೇಚ್ಛೆ, ಯಾರಾರ ಜೀವನ ಎಲ್ಲೊ! ಮರಣ ಎಲ್ಲೊ! ಯಾರಿಗೆ ತಾನೆ ಅರಿವುಂಟು.

"ಚಿಕ್ಕನಾಯಕನಹಳ್ಳಿ ಒಂದು ಉಜ್ವಲ ಕನಸು. ಅಲ್ಲಿಯೇ ನನ್ನ ಪುನರ್ಜನ್ಮ ಆಗಲೆಂದು ನನ್ನ ಹಿರಿಯ ಆಸೆ."

ಇದು ಶ್ರೀ ಜಿ.ವಿ.ನಾ. ಅವರು ಅನಾರೋಗ್ಯ ಪೀಡಿತರಾಗಿ ಚಿಕ್ಕನಾಯಕನಹಳ್ಳಿ ಬಿಟ್ಟು ಬೆಂಗಳೂರಿಗೆ ಹೋದ ಮೇಲೆ ನನಗೆ ಬರೆದ ಪತ್ರಗಳಲ್ಲಿ ತೋಡಿಕೊಂಡ ಆತ್ಮೀಯ ಅನಿಸಿಕೆಗಳು.

ಸುಮಾರು ನಾಲ್ಕು ದಶಕಗಳ ಕಾಲ ಅವರೊಂದಿಗೆ ಒಡನಾಡಿದ ನನಗೆ ಆತ್ಮೀಯ ಹಿರಿಯ ಸೋದರನಂತಿದ್ದ ಪುಣ್ಯ ಶ್ಲೋಕರಾದ ಜಿ.ವಿ.ನಾ ಅವರನ್ನು ಸ್ಮರಿಸುವ ಅವಕಾಶ ಲಭ್ಯವಾಗಿರುವುದು ನನ್ನ ಅಹೋಭಾಗ್ಯವೆಂದು ಭಾವಿಸುತ್ತೇವೆ. ಅವರ ಆತ್ಮಕ್ಕೆ ಭಾವಪೂರಿತ ನಮನಗಳು.

ಜಿ.ವಿ.ನಾ ಅವರದು ಬಹು ಮುಖ್ಯ ವ್ಯಕ್ತಿತ್ವ. ಅವರು ಗಾಂಧೀ ಅನುಯಾಯಿ, ನಿಷ್ಕಾಮ ಕರ್ಮಿ, ಸರ್ವೋದಯ ಸಾಧಕರು, ಸ್ವಾತಂತ್ರ್ಯಯೋಧರು, ಉತ್ತಮ ಬೋಧಕರು, ಪತ್ರಿಕೋದ್ಯಮಿ, ಸಾಹಿತಿ ಅನೇಕ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರು. ಎಲ್ಲಕ್ಕಿಂತ ಹೆಚ್ಚಾಗಿ ದೈವ ಭಕ್ತರಾಗಿ ಸಾರ್ಥಕ ಜೀವನ ನಡೆಸಿದವರು.

ನಾರಾಯಣಮೂರ್ತಿಗಳಿಗೆ ಜನಮನದಲ್ಲಿ ಸ್ಥಾನ ದೊರೆತುದು ಅವರ ಅಪೂರ್ವ ಪ್ರತಿಭೆಯಿಂದೇನೂ ಅಲ್ಲ. ಕೇವಲ ನಿಷ್ಠೆಯಿಂದ ನುಡಿದಂತೆ ನಡೆದುದರಿಂದ, ಅಖಂಡವಾದ ಆತ್ಮಸ್ಥೈರ್ಯದಿಂದ.

ತುಮಕೂರಿಗೆ ಸಮೀಪದ ಗೂಳೂರಿನಲ್ಲಿ ಅವರ ಜನನ. (೧೯೧೨ ರ ಮೇ.೨ ರಂದು) ಪ್ರೌಢಶಾಲಾ ವ್ಯಾಸಂಗಕಾಲದಲ್ಲಿ ಇವರಲ್ಲಿ ರಾಷ್ಟ್ರಭಕ್ತಿ, ಸ್ವಾತಂತ್ರ್ಯಪ್ರೇಮ ಮುಂತಾದ ಉತ್ಕೃಷ್ಟ ಭಾವನೆ ಬೇರೂರಲು ಕಾರಣರಾದವರು ಅವರ ಅಧ್ಯಾಪಕರಾಗಿದ್ದ ಶ್ರೀ ಎಂ.ಯಾಮುನಾಚಾರ್ಯರು. ಅದೇ ಕಾಲದಲ್ಲಿ ತುಮಕೂರಿಗೆ ಭೇಟಿಕೊಟ್ಟಿದ್ದ ಮಹಾತ್ಮ ಗಾಂಧೀ, ಕಸ್ತೂರಿಬಾ, ಮಹದೇವದೇಸಾಯಿರವರ ದರ್ಶನ, ಭಾಷಣ ಜಿ.ವಿ.ನಾ ಅವರ ಮನಸ್ಸನ್ನು ಸೂರೆಗೊಂಡಿತು.

ಮಹಾತ್ಮಗಾಂಧೀಯವರು ಹರಿಜನ ಪತ್ರಿಕೆಯಲ್ಲಿ ನೂತನ ಶಿಕ್ಷಣ ವಿಷಯವಾಗಿ ಬರೆದ ಒಂದು ಲೇಖನ ಜಿ.ವಿ.ನಾ ಅವರ ಮನಸೆಳೆಯಿತು, "ನೂತನ ಶಿಕ್ಷಣದಿಂದ ಭಾರತದಲ್ಲಿ ಶಿಕ್ಷಣ ಕ್ರಾಂತಿಯಾಗಬೇಕು, ಸ್ವಾತಂತ್ರ್ಯ

ಸ್ವರಾಜ್ಯ ಲಭಿಸುವಂತಾಗಬೇಕು. ರಾಜಕೀಯ, ಆರ್ಥಿಕ ಮೋಕ್ಷದೊರಕಬೇಕು." ಎಂದು ಗಾಂಧೀಜಿ ಪ್ರತಿಪಾದಿಸಿದ್ದರು. ಇದೇ ಶಿಕ್ಷಣದ ತಳಹದಿಯ ಮೇಲೆ ಕನಕಪುರದಲ್ಲಿ ಸಮಾನ ಮನಸ್ಕರಾದ ಶ್ರೀಕರಿಯಪ್ಪನವರೊಂದಿಗೆ ಸೇರಿ'ದಯಾನಂದ ವಸತಿ ವಿದ್ಯಾಲಯ' ವನ್ನು ಪ್ರಾರಂಭಿಸಲು ಕಾರಣಕರ್ತರಾದರು. ಈ ಶಾಲೆಯಲ್ಲಿ ಸರ್ಕಾರಿ ಶಿಕ್ಷಣವನ್ನು ಅಳವಡಿಸಿದ್ದರೂ ಜೊತೆ ಜೊತೆಗೆ ನೂತನ ಶಿಕ್ಷಣಕ್ರಮವನ್ನೂ ಅಳವಡಿಸಿದರು.

ಕೌಟುಂಬಿಕ ಕಾರಣಗಳಿಂದಾಗಿ ಜಿ.ವಿ.ನಾ ಕನಕಪುರ ಬಿಟ್ಟು ಚಿಕ್ಕನಾಯಕನಹಳ್ಳಿಯಲ್ಲಿ ನೆಲೆಸಬೇಕಾಗಿ ಬಂತು. ಅಲ್ಲಿಂದ ಮುಂದೆ ಅದೇ ಅವರ ಕಾರ್ಯಕ್ಷೇತ್ರವಾಯಿತು. ಕನಕಪುರಕ್ಕಾದ ನಷ್ಟ ಚಿಕ್ಕನಾಯಕನಹಳ್ಳಿಗೆ ಆದ ಲಾಭ.

೧೯೪೨ ರಲ್ಲಿ ಭಾರತ ಸ್ವಾತಂತ್ರ್ಯದ ಕೊನೆಯ ಉಜ್ವಲ ಸಂಗ್ರಾಮ 'ಮಾಡು ಇಲ್ಲವೇ ಮಡಿ' ಎಂದು ಗಾಂಧೀಜಿ ಕರೆಕೊಟ್ಟಿದ್ದರು ಹೋರಾಟದಲ್ಲಿ ನೇರ ಪಾಲ್ಗೊಳ್ಳಲು ಅವರ ಮನಸ್ಸು ಹಾತೊರೆಯುತ್ತಿತ್ತು. ಯುವಕರನ್ನು ಹೋರಾಟಕ್ಕೆ ಅಣಿಗೊಳಿಸಲು ಸ್ವಯಂಸೇವಕ ಪಡೆಯೊಂದಕ್ಕೆ ಶಿಸ್ತಿನ ತರಬೇತಿ ನೀಡುವ ಶಿಬಿರ ಆರಂಭಿಸಿದರು. ಇವರ ಮಾರ್ಗದರ್ಶನದಲ್ಲಿ ಚಳುವಳಿ ಅಹಿಂಸಾಯುತವಾಗಿ ಪರಿಣಾಮಕಾರಿಯಾಗಿ ನಡೆಯಿತು. ಚಳುವಳಿಯನ್ನು ಜೀವಂತವಾಗಿಡಲು ತಾಲ್ಲೂಕಿನಾದ್ಯಂತ ಅಲೆದರು. ಆಗ ಇವರ ಬಂಧನ ಆಗಬಹುದೆಂದು ಬಲವಾದ ವದಂತಿ ಇದ್ದರೂ ಅದೇಕೋ ಬಂಧನವಾಗಲಿಲ್ಲ.

ಆ ಸಮಯದಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೋಕಿನಲ್ಲಿ ಪ್ರೌಢಶಾಲೆ ಇರಲಿಲ್ಲ. ಇಡೀ ತುಮಕೂರು ಜಿಲ್ಲೆಯಲ್ಲಿ ಕೇವಲ ಮೂರು ಪ್ರೌಢಶಾಲೆಗಳಿದ್ದವು ತುಮಕೂರು, ತಿಪಟೂರು ಮತ್ತು ಮಧುಗಿರಿಯಲ್ಲಿ. ಮಾಧ್ಯಮಿಕ ಶಾಲೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪರ ಊರಿಗೆ ಹೋಗಿ ವಿದ್ಯಾಭ್ಯಾಸ ಮುಂದುವರಿಸುವಷ್ಟು ಅನುಕೂಲವಿರಲಿಲ್ಲ. ಶಿಕ್ಷಣವೂಇಲ್ಲದೆ, ಕೆಲಸವೂ ಇಲ್ಲದೆ ಯುವಶಕ್ತಿ ಅಪವ್ಯಯವಾಗುತ್ತಿತ್ತು. ಆ ಸಂದರ್ಭದಲ್ಲಿ, ನಡೆದ ಒಂದು ಪ್ರಸಂಗ ಚಿಕ್ಕನಾಯಕನಹಳ್ಳಿಯಲ್ಲಿ ಪ್ರೌಢಶಾಲೆಆರಂಭಿಸಲು ಅವರಿಗೆ ಪ್ರೇರಣೆ ನೀಡಿತು.

ಒಬ್ಬ ಬಡ ವಿದ್ಯಾರ್ಥಿ. ಮಾಧ್ಯಮಿಕಶಾಲೆಯಲ್ಲಿ ಉತ್ತೀರ್ಣನಾದ ಹುಡುಗ. ಬುದ್ಧಿವಂತ, ವಿದ್ಯಾಭ್ಯಾಸ ಮುಂದುವರಿಸುವ ಪ್ರಬಲ ಇಚ್ಛೆ ಅವನದು. ಆದರೆ ಅವನ ತಂದೆ ಬಡ ಕಂಬಳಿ ನೇಕಾರರು. ಕುಲ ಕಸುಬಿಗೆ ಮಗನನ್ನು ದೂಡಿದರು. ಹುಡುಗನಿಗೆ ಕೆಲಸಮಾಡಲು ಇಷ್ಟವಿಲ್ಲ. ಹುಡುಗನ ತಂದೆ ಜಿ.ವಿ.ನಾ ಅವರ ಮುಂದೆ ತಮ್ಮ ಅಳಲು ತೋಡಿಕೊಂಡರು. ಅವರ ಕರುಳು ಮಿಡಿಯಿತು ಏನಾದರೂ ಮಾಡಿ ಇಂತಹ ಹುಡುಗರಿಗೆ ಸ್ಥಳದಲ್ಲೇ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕೆಂದು ಸಂಕಲ್ಪಿಸಿದರು.

ಪ್ರಜಾಪ್ರತಿನಿಧಿ ಸಭೆಯ ಸದಸ್ಯ ಶ್ರೀ.ಸಿ.ಎಚ್. ಲಿಂಗದೇವರು ತಾಲ್ಲೋಕಿನ ಜನಪ್ರಿಯ ನಾಯಕರು. ಸಾಕಷ್ಟು ಸ್ಥಿತಿವಂತರಾದರೂ ವಿನಯಶೀಲರು. ಮೈಸೂರು

ಕಾಂಗ್ರೆಸ್ಸಿನ ಸದಸ್ಯರು. ಜಿ.ವಿ.ನಾ ಅವರ ಆಪ್ತ ಗೆಳೆಯರು. ಶಿಕ್ಷಣ ಸಂಸ್ಥೆಯನ್ನು ಆರಂಭಿಸುವ ವಿಚಾರವಾಗಿ ಅವರೊಂದಿಗೆ ಚರ್ಚಿಸಿದರು. ಸಮಾನ ಮನಸ್ಕರಾದ ಅವರೂ ಅದಕ್ಕೆ ಸ್ಪಂದಿಸಿದರು. ಅದೇ ವರ್ಷ ೧೯೪೫ ರಲ್ಲಿ 'ದೇಶಿಯ ವಿದ್ಯಾಪೀಠ' ಸಂಸ್ಥೆಯನ್ನು ಪ್ರಾರಂಭಿಸಿಯೇ ಬಿಟ್ಟರು. ಮೂರನೆ ವರ್ಷವೇ 'ದೇಶಿಯ ವಿದ್ಯಾ ಪೀಠ ಪ್ರೌಢಶಾಲೆ ಪ್ರಾರಂಭವಾಯಿತು.

'ವಿದ್ಯಾರ್ಥಿಗಳಲ್ಲಿ ರಾಷ್ಟ್ರದ ದಾಸ್ಯ ಶೃಂಖಲೆಯನ್ನು ಕಿತ್ತೊಗೆಯುವ ಕೆಚ್ಚನ್ನು ತುಂಬಬೇಕು. ಆತ್ಮಾಭಿಮಾನ ಉಕ್ಕಿ ಹರಿಯಬೇಕು ಆತ್ಮಗೌರವ, ಕರ್ತವ್ಯ ನಿಷ್ಠೆ, ಶಿಸ್ತು, ಸಂಯಮಗಳನ್ನು ಯುವ ಪೀಳಿಗೆಯಲ್ಲಿ ತುಂಬಿ ಸಾತ್ವಿಕ ವೀರತೇಜಸ್ಸಿನ ಯುವಕ ಯುವತಿಯರನ್ನು ರಾಷ್ಟ್ರೀಯ ಹೋರಾಟಕ್ಕೆ ಸಜ್ಜಗೊಳಿಸಬೇಕು ಇದೇ ವಿದ್ಯಾಪೀಠದ ಆದರ್ಶವಾಯಿತು.

ಅಧ್ಯಾಪನಾಕಾರ್ಯ ಜಿ.ವಿ.ನಾ ಅವರಿಗೆ ತುಂಬ ಪ್ರಿಯವಾದ ಕೆಲಸ. ಆದರೆ ಆರ್ಥಿಕ ಮುಗ್ಗಟ್ಟಿನಿಂದಾಗಿ ಅವಶ್ಯಕ ಪದವಿಗಳಿಸಲು ಸಾಧ್ಯವಾಗಿರಲಿಲ್ಲ. ಕಾಲೇಜು ಬಿಟ್ಟ ಹನ್ನೆರಡು ವರ್ಷಗಳ ನಂತರ ಕಲ್ಕತ್ತಾ ವಿಶ್ವವಿದ್ಯಾನಿಲಯದ ಪದವಿ ಪರೀಕ್ಷೆಗೆ ಹೊರವಿದ್ಯಾರ್ಥಿಯಾಗಿ ಕುಳಿತು ಪದವಿಧರರಾದರು. ಪದವಿ ಅವರಿಗೆ ಕೇವಲ ಅರ್ಹತಾ ಪತ್ರಕ್ಕಾಗಿ ಮಾತ್ರ. ಮೊದಲೇ ಹತ್ತು ಪದವಿಗಳು ಗಳಿಸಿಕೊಡಬಹುದಾದಷ್ಟು ಜ್ಞಾನವನ್ನು ಸ್ವಪ್ರಯತ್ನ, ಸ್ವಾಧ್ಯಾಯನದಿಂದ ಗಳಿಸಿಕೊಂಡಿದ್ದರು. ಅನಂತರ ಅವರು ಯಾವ ಸಂಭಾವನೆಯನ್ನೂ ಸ್ವೀಕರಿಸದೆ ಗೌರವ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿದರು.

೧೯೪೭ ರಲ್ಲಿ ನಡೆದ 'ಮೈಸೂರು ಚಲೋ' ಚಳುವಳಿಯಲ್ಲಿ ದೇಶಿಯ ವಿದ್ಯಾಪೀಠ ಪ್ರಮುಖ ಪಾತ್ರ ವಹಿಸಿ ರಾಜ್ಯಕ್ಕೆ ಮಾದರಿ ಆಯಿತು. ಜಿ.ವಿ.ನಾ ಅವರ ಮಾರ್ಗದರ್ಶನದಲ್ಲಿ ಸತ್ಯಾಗ್ರಹಕ್ಕೆ ವಿದ್ಯಾರ್ಥಿಗಳನ್ನು ಅನುಗೊಳಿಸಿದ ರೀತಿ ಅಪೂರ್ವವಾದುದು. ಹೆಚ್ಚು ಕಡಿಮೆ ಶಾಲೆಯ ಎಲ್ಲ ವಿದ್ಯಾರ್ಥಿಗಳೂ ಹೋರಾಟದ ಕಣಕ್ಕೆ ಧುಮುಕಿದರು. ಕಾಯಿದೆ ಭಂಗಮಾಡಿ ಜಿ.ವಿ.ನಾ ಸೆರೆಮನೆ ಸೇರಿದರು. ಅದೇ ರೀತಿ ಇಬ್ಬರು ಅಧ್ಯಾಪಕರ ಸಹಿತ ಕೆಲವು ವಿದ್ಯಾರ್ಥಿಗಳೂ ಕಾರಾಗೃಹ ಶಿಕ್ಷೆಗೊಳಗಾದುದು ಉಲ್ಲೇಖನೀಯ.

ಪ್ರೌಢಶಾಲೆಗೆ ಸ್ವಂತ ಕಟ್ಟಡ ಇರಲಿಲ್ಲ ಅದಕ್ಕಾಗಿ ಒಂದು ಒಳ್ಳೆಯ ನಿವೇಶನವನ್ನು ದಾನವಾಗಿ ಪಡೆದರು. ಅಡಿಗಲ್ಲನ್ನೂ ಇಟ್ಟಾಯಿತು. ನಿರ್ಮಾಣಕಾರ್ಯ ಆರಂಭವಾಗಬೇಕಿತ್ತು. ಅಷ್ಟರಲ್ಲಿ ನಿವೇಶನದ ಬಗ್ಗೆ ಒಂದು ಸಣ್ಣ ತಕರಾರು ಹುಟ್ಟಿಕೊಂಡಿತು. ಒಂದು ಒಳ್ಳೆಯ ಕಾರ್ಯಕ್ಕಾಗಿ ಕೊಡುವ ಕೊಡುಗೆ ಸಂಪೂರ್ಣ ತ್ಯಾಗಮನೋಭಾವದಿಂದ ಕೂಡಿರಬೇಕು, ಅರ್ಧಮನಸ್ಸಿನಿಂದಲ್ಲ ಎಂದು ಅವರ ಅಭಿಪ್ರಾಯ ಕೂಡಲೇ ಆ ನಿವೇಶನವನ್ನು ದಾನಿಗಳಿಗೇ ಹಿಂತಿರುಗಿಸಿದರು.

ಹೊಸ ನಿವೇಶನದಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ಹಣ ಸಂಗ್ರಹಿಸಲು ಲಾಟರಿ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದು ಕಾರ್ಯಕಾರಿ ಸಮಿತಿಯ ಬಹು

ಸದಸ್ಯರ ಆಶಯವಾಗಿತ್ತು. ಇದನ್ನು ಜಿ.ವಿ.ನಾ ಪ್ರಬಲವಾಗಿ ವಿರೋಧಿಸಿದರು. ಸಾವಿರಾರು ಜನಕ್ಕೆ ಆಮಿಷ ತೋರಿಸಿ ಶಿಕ್ಷಣ ಕಾರ್ಯಕ್ಕೆ ಹಣ ಸಂಗ್ರಹಿಸುವುದು ಪರೋಕ್ಷವಾಗಿ ಅನೈತಿಕತೆಯ ಪ್ರೋತ್ಸಾಹವೆಂದು ಅವರ ನಿಶ್ಚಿತ ಭಾವನೆಯಾಗಿತ್ತು. ಗುರಿಯಷ್ಟೇ ಮಾರ್ಗವೂ ಶುದ್ಧವಾಗಿರಬೇಕು. ಆದರೆ ಇತರ ಅನೇಕ ಸದಸ್ಯರು ಇವರಷ್ಟು ವಿಚಾರದ ಔನ್ನತ್ಯಕ್ಕೆ ಏರಲಿಲ್ಲ. ಬಹುಮತದಿಂದ ಯೋಜನೆ ಅಂಗೀಕಾರವಾಯಿತು. ಬಹುಮತಕ್ಕೆ ಮನ್ನಣೆ ಇತ್ತು ಜಿ.ವಿ.ನಾ ಸಂಸ್ಥೆಯಿಂದ ಹೊರನಡೆದರು.

ಅನಂತರ ಮಾಯಸಂದ್ರದಲ್ಲಿ ಸರ್ಕಾರಿ ಕೆಲಸಕ್ಕೆ ರಾಜಿನಾಮೆ ಇತ್ತು ಸಾಮಾಜಿಕ ಕಾರ್ಯದಲ್ಲಿ ನಿರತರಾಗಿದ್ದ ಶ್ರೀ. ಮಾ.ಕೃ.ನರಸಿಂಹಮ್ಮಯ್ಯನವರ ನೆರವಿನೊಂದಿಗೆ ಸರ್ವೋದಯ ತತ್ವಗಳ ಆಧಾರದ ಮೇಲೆ ಸರ್ವೋದಯ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿದರು. ಸಂಸ್ಥೆಯ ಸದಸ್ಯರಲ್ಲಿ ಒಂದು ಅಲಿಖಿತ ಒಪ್ಪಂದವಾಗಿತ್ತು. "ಯಾವ ಕಾರಣಕ್ಕೂ ಕಾರ್ಯ ಸಮಿತಿ ಸದಸ್ಯರು ರಾಜಕೀಯ ಪ್ರವೇಶ ಮಾಡಬಾರದು, ಖಾದಿ ಧರಿಸಬೇಕು. ಸಭೆ ಆರಂಭವಾಗುವ ಮುನ್ನ ಅರ್ಧಗಂಟೆ ನೂಲಬೇಕು" ಎಂದು. ಸದಸ್ಯರೆಲ್ಲರೂ ಅದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಆದರೆ ಸಂಸ್ಥೆಯ ಅಧ್ಯಕ್ಷರೇ ರಾಜಕೀಯ ಪ್ರವೇಶದ ಕಡೆಗೆ ಒಲವು ತೋರಲು ಪ್ರಾರಂಭಿಸಿದರು. ನಡೆನುಡಿಗಳಲ್ಲಿ ಸಾಮರಸ್ಯವಿರಬೇಕೆಂದು ದೃಢವಾಗಿ ನಂಬಿದ್ದ ಜಿ.ವಿ.ನಾ "ಅವರವರ ಅಂತರಾತ್ಮಕ್ಕೆ ತಕ್ಕಂತೆ ನಡೆಯಲು ಅವರು ಸಮರ್ಥರು. ಇದಕ್ಕೆ ನಮ್ಮ ಮೈತ್ರಿ ಅಡ್ಡ ಬರಬಾರದು" ಎಂದು ಆ ಸಂಸ್ಥೆಯಿಂದಲೂ ದೂರವಾದರು.

ಮುಂದೆ ಜಿ.ವಿ.ನಾ ಸಾಹಿತ್ಯ ಸೇವೆಗೆ ತಮ್ಮ ಜೀವನವನ್ನು ಮುಡುಪಾಗಿಟ್ಟರು. ಬರಹವನ್ನು ವೃತ್ತಿಯನ್ನಾಗಿ ಸ್ವೀಕರಿಸಲಿಲ್ಲ. ಬರೆಯಬೇಕೆನಿಸಿದುದನ್ನು ಬರೆದರು. ಅವು ಗಾಂಧೀ ಸಾಹಿತ್ಯದಲ್ಲಿ ಉತ್ತಮ ಕೃತಿಗಳಾದವು.

ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಜಿ.ವಿ.ನಾ ಅವರ ಮನ ಸರ್ವೋದಯದ ವಿಚಾರದೆಡೆ ತಿರುಗಿತು. ಸರ್ವೋದಯ, ಭೂದಾನ, ಅಹಿಂಸಾ ಕ್ರಾಂತಿಯ ಮೂಲಕ ರಾಷ್ಟ್ರ ನಿರ್ಮಾಣ ಈ ತತ್ವಗಳ ಪ್ರಚಾರ ಮಾಡುತ್ತಾ ಆಚಾರ್ಯ ವಿನೋಬಾ ದೇಶದಾದ್ಯಂತ ಪಾದಯಾತ್ರೆ ಕೈಗೊಂಡಿದ್ದರು. ಜಿ.ವಿ.ನಾ, ಶ್ರೀ ಅರೆಯರ್, ಖಾದ್ರಿ ಶಾಮಣ್ಣ, ಸ್ವಾಮಿ ವಿಶ್ವಾನಂದ ಮುಂತಾದವರ ಜೊತೆ ಚಿಕ್ಕನಾಯಕನಹಳ್ಳಿ ತಾಲ್ಲೋಕಿನಲ್ಲಿ ಪಾದಯಾತ್ರೆ ಕೈಗೊಂಡರು. ಶ್ರೀ ಅರೆಯರ್ ಅವರು ನಾರಾಯಣಮೂರ್ತಿಗಳ ಬಗ್ಗೆ ಈ ರೀತಿ ಉಲ್ಲೇಖಿಸಿದ್ದಾರೆ. "ಇಪ್ಪತ್ತೈದು ವರ್ಷದ ಪಾದಯಾತ್ರೆಯಲ್ಲಿ ನನಗೆ ದೊರೆತ ರತ್ನಗಳು ಅನೇಕ ಅವುಗಳಿಂದ ನಾನು ಬಲು ಪ್ರಕಾಶ ಪಡೆದೆ. ಅವುಗಳಲ್ಲಿ ನನಗೆ ದೊರೆತ ಪರಮ ಪವಿತ್ರ "ಸ್ನಿಗ್ಧಶೀಲ ಸಾಲಿಗ್ರಾಮ" ಶ್ರೀ ಜಿ.ವಿ.ನಾರಾಯಣಮೂರ್ತಿಯವರು. ಒಬ್ಬ ಸಹೃದಯಿ ವಿಶ್ವಮಾನವನ ದರ್ಶನವಾಯಿತು.

'ನಿಮ್ಮ ಜೀವನ ಸಾಧನೆಯ ಸಾಫಲ್ಯ ವೈಫಲ್ಯಗಳೇನು'? ಎಂದು ಜಿ.ವಿ.ನಾ ಅವರನ್ನು ಸಂದರ್ಶಿಸಿದಾಗ ಅವರು ಕೊಟ್ಟ ಉತ್ತರ ಮನೋಜ್ಞವಾದುದು. "ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ವರ್ಷ ಕೆಲಸಮಾಡಿದೆ. ಗಾಂಧೀ ಕಂಡ ರಾಮರಾಜ್ಯದ ಸರ್ವೋದಯ ಸಮಾಜ ರಚನೆಯ ಕನಸು ನನ್ನದಾಗಿತ್ತು. ಒಂದು ವಿಧದಲ್ಲಿ ನನ್ನದು ಹಗಲುಗನಸಾಯಿತು. ಆದರೆ ಅದಕ್ಕಾಗಿ ನಾನು ಎಂದೂ ವ್ಯಸನಪಡುವುದಿಲ್ಲ. ಪ್ರತಿಯೊಬ್ಬರಿಗೂ ತಮ್ಮದೇ ಆದ ಸ್ವಂತ ವ್ಯಕ್ತಿತ್ವವಿದೆ, ಅಭಿಪ್ರಾಯವಿದೆ. ಎಲ್ಲರನ್ನೂ ನನ್ನ ಮಟ್ಟಕ್ಕೇರುವಂತೆ ಬಯಸುವುದು ತಪ್ಪಾದೀತು. ಮಾನವನು ಪರಿಸರದ ಶಿಶು. ಪರಿಸರವನ್ನು ಮೆಟ್ಟಿ ನಿಲ್ಲುವವರು ಎಲ್ಲೋ ಕೆಲವರು ಅಭಿಪ್ರಾಯವನ್ನು ಇನ್ನೊಬ್ಬರ ಮೇಲೆ ಹೇರಲು ಎಂದೂ ಬಯಸುವುದಿಲ್ಲ ಭಿನ್ನಾಭಿಪ್ರಾಯ ಉಂಟಾದಾಗ ನಾನೇ ಅಲ್ಲಿಂದ ದೂರ ಸರಿದಿದ್ದೇನೆ. ಅವರವರ ದಾರಿಯಲ್ಲೇ ಅವರಿಗೆ ಶ್ರೇಯಸ್ಸನ್ನು ಕೋರಿದ್ದೇನೆ. ಆದರೆ ಅದನ್ನು ವಿಫಲತೆ ಎನ್ನಲಾಗದು. ಕೇವಲ ಗುರಿಸಾಧಿಸುವುದರಲ್ಲೇ ಜೀವನದ ಸಾಫಲ್ಯವಿದೆ ಎಂದು ನನಗನ್ನಿಸುವುದಿಲ್ಲ. ಗುರಿ ಸಾಧಿಸುವುದು ಎಷ್ಟು ಮುಖ್ಯವೋ ಗುರಿಸಾಧನೆಯ ಮಾರ್ಗವೂ ಅಷ್ಟೇ ಪವಿತ್ರವಾಗಿರಬೇಕಾದುದು ಮುಖ್ಯ ಎನ್ನುವುದು ನನ್ನ ಭಾವನೆ. ಉಚ್ಚ ಆದರ್ಶಗಳು ಜೀವನದ ಗುರಿಯಾಗಬೇಕು. ಆದರ್ಶದ ಸಾಧನೆಗೆ ಪ್ರಾಮಾಣಿಕ ಪ್ರಯತ್ನ ಅಗತ್ಯ ಆ ಪ್ರಯತ್ನದಲ್ಲೇ ಆನಂದವಿದೆ."

"ಬದುಕಿನಲ್ಲಿ ಏರಿಳಿತಗಳು ಸಹಜ. ಈ ಏರಿಳಿತಗಳ ಜೀವನದಲ್ಲಿ ಮಾನವನನ್ನು ನಡೆಸುವುದು ಒಂದು ಅಪ್ರತಿಹತ ಚೇತನ, ಬದುಕಿನ ಶುಭಾಶುಭ, ಜಯಾಪಜಯಗಳ ನಡುವೆ ಮಾನಸಿಕ ಸಮತೋಲನ ಭಗವಂತನ ಕೃಪೆಯಿಂದ ಮಾತ್ರ ಸಾಧ್ಯ" ('ಸರ್ವೋದಯ ಪದಗ್ರಂಥದಿಂದ ಉದ್ಧೃತ')

ಜಿ.ವಿ.ನಾ ಸ್ವಾರ್ಥಕ್ಕಾಗಿ ಏನನ್ನೂ ಬಯಸಲಿಲ್ಲ. ವಿದ್ಯಾಪೀಠದ ಅಧ್ಯಾಪಕರಾಗಿದ್ದಾಗಲೂ ಸಂಭಾವನೆ ಸ್ವೀಕರಿಸಲಿಲ್ಲ. ಆರ್ಥಿಕ ಸಂಕಷ್ಟದಲ್ಲಿದ್ದರೂ ಸ್ವಾತಂತ್ರ್ಯಯೋಧರಿಗೆ ಸಿಕ್ಕುವ ಯಾವುದೇ ಸವಲತ್ತುಗಳನ್ನು ಸ್ವೀಕರಿಸಲು ನಿರಾಕರಿಸಿದರು. "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷುಕದಾಚನ' ಎಂಬ ಗೀತಾಚಾರ್ಯನ ನುಡಿಯನ್ನು ಜೀವನದಲ್ಲಿ ಅಳವಡಿಸಿಕೊಂಡು ನಿಸ್ವಾರ್ಥ ಕರ್ಮಯೋಗಿಯಾಗಿಯೇ ಬಾಳಿದರು.

೧೯೭೮ ರಲ್ಲಿ ಪಾರ್ಶ್ವವಾಯು ಪೀಡಿತರಾದರು. ಚಿಕಿತ್ಸೆಯನಂತರ, ಅದಕ್ಕೂ ಮಿಗಿಲಾಗಿ ಅವರು ಪ್ರಬಲ ಇಚ್ಛಾಶಕ್ತಿಯಿಂದ ಚೇತರಿಸಿಕೊಂಡರು. ಅನಾರೋಗ್ಯ ಸ್ಥಿತಿಯಲ್ಲೂ ಅವರ ಅಧ್ಯಯನ, ಚಿಂತನ ಸಾಗುತ್ತಲೇ ಇತ್ತು. ಬರೆಯಲು ಕೈ ಓಡದಾದಾಗ ಯಾರಿಂದಲಾದರೂ ಬರೆಸುತ್ತಿದ್ದರು. ಕೊನೆಗೂ ೧೯೮೫ ರ ಮಾರ್ಚಿಯಲ್ಲಿ ಜಿ.ವಿ.ನಾ, ಇನ್ನಿಲ್ಲವಾದರು. ಒಬ್ಬ ಆತ್ಮೀಯ ಸ್ನೇಹಿತನನ್ನು, ಹಿರಿಯ ಸೋದರನನ್ನು, ಕುಟುಂಬದ ಹಿತೈಷಿಯನ್ನು ಕಳೆದುಕೊಂಡ ದೌರ್ಭಾಗ್ಯ ನನ್ನದಾಯಿತು.

***

ವೈಚಾರಿಕತೆ ಮತ್ತು ಧಾರ್ಮಿಕತೆ ಪರಸ್ಪರ ವಿರೋಧವೇ?

–ಜಿ.ಟಿ.ನಾರಾಯಣರಾವ್

"ನೀವೊಬ್ಬ ವಿಚಾರವಾದಿ, ದೇವರ ಅಸ್ತಿತ್ವವನ್ನು ಒಪ್ಪದವರು. ಜೊತೆಗೆ ವಿಜ್ಞಾನ ಲೇಖಕ ಕೂಡ. ಹೀಗಿದ್ದರೂ ಅಪ್ಪಟ ಭಗವಂತಸ್ತುತಿಗಳಾಗಿರುವ ಸಂಗೀತ ಮತ್ತು ಭಕ್ತಿ ವಾಙ್ಮಯವನ್ನು ಗಾಢವಾಗಿ ಪ್ರೀತಿಸುತ್ತೀರಿ ಮತ್ತು ನಿಮ್ಮ ಬರೆಹಗಳಲ್ಲಿ ಉದಾಹರಿಸುತ್ತಲೂ ಇದ್ದೀರಿ. ಈ ವೈರುಧ್ಯ ಕುರಿತು ನಿಮ್ಮ ವಿವರಣೆ ತಿಳಿಯಬಯಸುತ್ತೇನೆ."

ಸಭೆ ಸಂಕಿರಣಗಳಲ್ಲಿಯೂ ಪತ್ರವ್ಯವಹಾರಗಳಲ್ಲಿಯೂ ಇಂಥ ಪ್ರಶ್ನೆಗಳನ್ನು ಆಗಾಗ ನಾನು ಎದುರಿಸಬೇಕಾಗುತ್ತದೆ. ಇದೊಂದು ಸಾರ್ವಜನಿಕಾಸಕ್ತಿಯ ಕುತೂಹಲವಾಗಿರುವುದರಿಂದ ಪ್ರಸ್ತುತ ಲೇಖನದ ಮೂಲಕ ಅವರ ಸಂದೇಹ ಪರಿಹರಿಸಲು ಪ್ರಯತ್ನಿಸುತ್ತೇನೆ. ವೈಚಾರಿಕತೆ ಮತ್ತು ಧಾರ್ಮಿಕತೆ ಪರಸ್ಪರ ವಿರೋಧಿಗಳಲ್ಲ. ಬದಲು. ಎರಡರ ಹೂರಣಗಳನ್ನೂ ಸರಿಯಾಗಿ ಗ್ರಹಿಸಿ ತದನುಸಾರ ವ್ಯಕ್ತಿ ತನ್ನ ಬದುಕನ್ನು ರೂಪಿಸಿಕೊಂಡರೆ ಅವು ಪರಸ್ಪರ ಪೂರಕಗಳೆಂಬುದು ನನ್ನ ಖಚಿತ ಅನುಭವ.

ಮಾನವೇತಿಹಾಸದ ಚಿಕಿತ್ಸಕ ಅಧ್ಯಯನದಿಂದ ತಿಳಿದುಬರುವ ಒಂದು ಸಂಗತಿ: ನಮ್ಮ ಬದುಕನ್ನು ನಿಯಂತ್ರಿಸುವ ಮಾನವಜನ್ಯ ಪ್ರಭಾವಗಳೆ ಮಾನವೀಯತೆ, ನೈತಿಕತೆ, ವೈಚಾರಿಕತೆ ಮತ್ತು ವೈಜ್ಞಾನಿಕತೆ ಇವು ನೈಸರ್ಗಿಕ ಬಲಗಳಾಗಿರುವ ಗುರುತ್ವ, ವಾಯುಸಂಮರ್ದ, ಕಾಂತತ್ವ, ವಿಕಿರಣ ಮುಂತಾದವುಗಳಿಗಿಂತ ಭಿನ್ನವಾದವು. ಮೊದಲಿನವು ಜ್ಞಾತೃನಿಷ್ಠ ಎರಡನೆಯವು ಜ್ಞೇಯನಿಷ್ಠ. ಸರಳವಾಗಿ ಹೇಳುವುದಾದರೆ ಜ್ಞಾತೃನಿಷ್ಠ ಪ್ರಭಾವಗಳು ನಮ್ಮ ನಂಬಿಕೆಯ ಪ್ರಪಂಚಕ್ಕೆ ಸೇರಿದವು. ಇವನ್ನು ನಿಸರ್ಗದಲ್ಲಿ ರುಜುವಾತಿಸಲು ಅಥವಾ ಹುಸಿವಾತಿಸಲು ಸಾಧ್ಯವಾಗದು. ಧರ್ಮದ ಮೂಲ ಯಾವಾಗಲೂ ನಂಬಿಕೆ. "ನಂಬಿ ಕೆಟ್ಟವರಿಲ್ಲವೋ ರಂಗಯ್ಯನ" ಎಂದು ಹಾಡಿದ್ದಾರೆ ಪುರಂದರದಾಸರು. ನಂಬಿಕೆಯಿಲ್ಲದ ಜೀವನಕ್ಕೆ ಅರ್ಥವಿಲ್ಲ. ಆದರೆ ಆ ನಂಬಿಕೆ ಜೀವನೋತ್ಕರ್ಷಕ ಮೌಲ್ಯಗಳನ್ನು ಕುರಿತದ್ದಾಗಿರಬೇಕು ಮಾತ್ರ.

ಇನ್ನು ಜ್ಞೇಯನಿಷ್ಠ ಬಲಗಳು ಹೀಗಲ್ಲ: ಇವನ್ನು ನಿಸರ್ಗದಲ್ಲಿ ಯಾರು, ಎಲ್ಲಿ ಮತ್ತು ಎಂದೂ ಬೇಕಾದರೂ ಸಾಧಿಸಬಹುದು. ಇಲ್ಲಿ ಪಾತ್ರವಹಿಸುವುದು ಭರವಸೆ. ಮಾನವತೀತ ನಿಸರ್ಗದ ಬಗೆಗಿನ ದೃಢ ನಂಬಿಕೆಯೇ ಈ ಭರವಸೆ: ಸೂರ್ಯ, ಚಂದ್ರ, ವಾಯುಮಂಡಲ ಮುಂತಾದವು ಎಂದೂ ನಮಗೆ ಮೋಸಮಾಡುವುದಿಲ್ಲವೆಂಬ ನಂಬಿಕೆಯಿದು. ನೈಸರ್ಗಿಕ ಬಲಗಳಿಗೆ

ಅನುವರ್ತಿಯಾಗಿ ಬಾಳುವುದೊಂದೇ ನಮಗಿರುವ ಮಾರ್ಗ. ವಿರೋಧವಾಗಿ ಬಾಳಲು ಪ್ರಯತ್ನಿಸಿದರೆ ನಮ್ಮ ಸರ್ವನಾಶ ಖಾತ್ರಿ ನಿಸರ್ಗಕ್ಕೆ ಮನವಿಲ್ಲ. ಮರುಕವೂ ಇಲ್ಲ ಎನ್ನುವುದು ಈ ಅರ್ಥದಲ್ಲಿ. ಇದನ್ನೇ ಅತ್ಯಂತ ಮಾರ್ಮಿಕವಾಗಿ ದಾಸರೆಂದಿದ್ದಾರೆ. "ಆತಂಕನ ದೂತರಿಗೆ ಕಿಂಚತ್ತು ದಯವಿಲ್ಲ."

ಮಾನವೀಯತೆ ಎಂದರೆ ಹೃದಯವಂತಿಕೆ, ಅನುಕಂಪ, ಅಂತಃಕರಣ. ಪ್ರೀತಿ ಅಥವಾ ದಯೆ. "ದಯವೇ ಧರ್ಮದ ಮೂಲವಯ್ಯಾ" ಎಂದಿದ್ದಾರೆ ಬಸವಣ್ಣ. ಪ್ರತಿಯೊಂದು ಮಾನವಜನ್ಯ ಪ್ರಭಾವಕ್ಕೂ ಒಂದು ಮಿತಿ ಅವಶ್ಯಕ. ಮಾನವೀಯತೆಗೆ ಈ ಮಿತಿಯನ್ನು ವಿಧಿಸುವ ಪ್ರಭಾವಕ್ಕೆ ನೀತಿ ಅಥವಾ ನೈತಿಕತೆಯೆಂದು ಹೆಸರು. ನಾವು ಮನುಷ್ಯರಾಗಿ ಸಾಮರಸ್ಯದಲ್ಲಿ ಬಾಳಬೇಕಾದರೆ ಹಲವಾರು ನೀತಿ ನಿಯಮಗಳನ್ನು ಪಾಲಿಸುವುದು ಅತ್ಯಗತ್ಯ. ಇವುಗಳ ಸಾರವನ್ನು ಬಸವಣ್ಣ "ಕಳಬೇಡ, ಕೊಲಬೇಡ. ಹುಸಿಯ ನುಡಿಯಲುಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ" ಎಂಬ ಸಪ್ತ ಸೂತ್ರಗಳಲ್ಲಿ ನಿರೂಪಿಸಿದ್ದಾರೆ. ನೀತಿರಹಿತ ಪ್ರೀತಿ ಧೃತರಾಷ್ಟ್ರನಂತೆ ಕುರುಡು. ಪತ್ನಿ ಅಹಲ್ಯೆಗೆ ಶಾಪವಿತ್ತ ಗೌತಮನಂತೆ ಬರಡು. ನೀತಿನಿಯಂತ್ರಿತ ಪ್ರೀತಿ. ಮತ್ತು ಪ್ರೀತಿಸೇಚಿತ ನೀತಿಯೇ ಸ್ವಸ್ಥಜೀವನದ ಮೂಲ.

ನಿಸರ್ಗದಲ್ಲಿಯ ಪ್ರತಿಯೊಂದು ವಿದ್ಯಮಾನವೂ ಕಾರ್ಯ ಕಾರಣ ಸಂಬಂಧದಿಂದ ಸಂಯೋಜಿತವಾಗಿದೆ. ಕಾರಣರಹಿತ ಕಾರ್ಯವಿಲ್ಲ. ಅಂತೆಯೇ ಕಾರ್ಯ ಕಾರಣವಿಲ್ಲ. ಇದೊಂದು ಅನುಭವಜನ್ಯ ನಿಯಮ. ನಿಸರ್ಗದ ಒಂದು ಅಂಶವಾಗಿರುವ ನಮ್ಮ ಬದುಕಿಗೂ ಈ ನಿಯಮವನ್ನು ಅಳವಡಿಸುವುದು ನಮ್ಮ ಹಿತದೃಷ್ಟಿಯಿಂದ ಅಗತ್ಯ. ಇಲ್ಲವಾದರೆ ನಾವು ಮೂಢನಂಬಿಕೆ ಮತ್ತು ಅಂಧಶ್ರದ್ಧೆಗಳ ದಾಸರಾಗುವುದು. ಉದಾಹರಣೆಗೆ ವ್ಯಕ್ತಿಯ ವರ್ತಮಾನ, ಭೂತ ಭವಿಷ್ಯಗಳೆಲ್ಲವೂ ಆತನ ಜಾತಕದಲ್ಲಿ ನಿಹಿತವಾಗಿವೆ, ತಜ್ಞಜ್ಯೋತಿಷಿ ಜಾತಕವನ್ನು 'ಓದಿ' ಈ ವಿವರಗಳನ್ನು ತಿಳಿಸಬಲ್ಲ ಎಂಬ 'ಪ್ರಾಚೀನ' ನಂಬಿಕೆ ಸ್ಪಷ್ಟವಾಗಿ ಅರ್ಥಹೀನವೆಂದೇ ಎಲ್ಲ ಮೂಢನಂಬಿಕೆಗಳ ತಾಯಿ ಈ ಫಲಜ್ಯೋತಿಷ್ಯ. ವ್ಯಕ್ತಿಯ ಭವಿಷ್ಯ ಆತನ ಕೈಯಲ್ಲಿದೆಯೇ ವಿನಾ ಯಾವುದೇ ಗ್ರಹ ತಾರೆಗಳಲ್ಲಿ ಎಂದೂ ಅಲ್ಲ. ಇಂಥ ನಿಲವೇ ವೈಚಾರಿಕತೆ.

ಮಾನವನ ವೈಚಾರಿಕಮತಿ ನಿಸರ್ಗದೊಡನೆ ವ್ಯವಹರಿಸುವಾಗ ಆತನಲ್ಲಿ ಮಿನುಗುವ ಅರಿವಿಗೆ ವಿಜ್ಞಾನವೆಂದು ಹೆಸರು. ನಿಸರ್ಗವೆಂಬ ಸ್ವಯಂಚಾಲಿತ ನಿರಂತರ ಕ್ರಿಯಾಶೀಲ 'ಯಂತ್ರ' ದ ವಿಧಿನಿಯಮಸೂತ್ರಗಳನ್ನು ಖಚಿತ ಪದಗಳಲ್ಲಿ ನಿರೂಪಿಸುವುದು ವಿಜ್ಞಾನದ ಧ್ಯೇಯ. ದೇಶಕಾಲಗಳಲ್ಲಿ ತೀರ ನಗಣ್ಯನಾಗಿರುವ ಮಾನವ ಎಂದೂ ನಿಸರ್ಗದ ಪೂರ್ತಿ ರಹಸ್ಯವನ್ನು ಅರಿತು ವಿವರಿಸಲಾರ. ವಿಜ್ಞಾನಕಾರ್ಯದಲ್ಲಿ ಮಾನವ ಮಗ್ನನಾಗಿರುವಾಗ ಆತನ ಮನಸ್ಸು ಒಂದು ವಿಶಿಷ್ಟ ಹದದಲ್ಲಿರುತ್ತದೆ. ನಿರ್ಲಿಪ್ತತೆ, ನಿರ್ಮೋಹ, ನಿರಪೇಕ್ಷತೆ ಮುಂತಾದವು

(ಒಟ್ಟಾಗಿ ಸ್ಥಿತಪ್ರಜ್ಞೆ) ಇದರ ಮುಖ್ಯ ಲಕ್ಷಣ. ಇದಕ್ಕೆ ವೈಜ್ಞಾನಿಕ ಮನೋಧರ್ಮಅಥವಾ ವೈಜ್ಞಾನಿಕತೆ ಎಂದು ಹೆಸರು.

ವ್ಯಕ್ತಿ ಒಬ್ಬನೇ ಇರುಳಿನಾಗಸದ ಚೆಲವು ನೋಡುತ್ತ ತನ್ನನ್ನೇ ತಾನು ಮರೆತಿರುವಾಗ, ಅಥವಾ ಕಡಲತಡಿಯಲ್ಲಿ ಕುಳಿತು ಎದುರಿನ ರುದ್ರದೃಶ್ಯ ನೋಡುತ್ತ ಬೆರಗಾಗುತ್ತಿರುವಾಗ, ಇಲ್ಲವೇ ಬೆಟ್ಟದ ಕೊಡಿಯಿಂದ ಸುತ್ತಲಿನ ಬಾನುಬುವಿಗಳನ್ನು ದಿಟ್ಟಿಸಿ ಚಕಿತನಾಗುತ್ತಿರುವಾಗ ಆತನ ಮನಸ್ಸಿನಲ್ಲಿ ಮೂಡುವ ಭಾವನೆಗೆ ಬ್ರಹ್ಮಾಂಡೀಯ ಧಾರ್ಮಿಕ ಸಂವೇದನೆ ಎಂದು ಹೆಸರು. ಇದು ಕೂಡ ಸಂತೋಷ, ದುಃಖ, ದ್ವೇಷ, ಮರುಕ ಮುಂತಾದ ಇತರ ರಾಗಭಾವಗಳ ಸಾಲಿಗೆ ಸೇರಿರುವ ಶುದ್ಧ ಜ್ಞಾತೃನಿಷ್ಠ ಭಾವ ತನಗಿಂತ ಅಧಿಕತ್ರಾಣಿಯಾದ ಏನೋ ಒಂದು ಶಕ್ತಿ ಇದೆ. ಅದರ ಅನುಗ್ರಹಕ್ಕೆ ಪಾತ್ರನಾದರೆ ಮಾತ್ರ ತನ್ನ ಶ್ರೇಯಸ್ಸು, ಇಲ್ಲವಾದರೆ ತನಗೆ ಉಳಿಗಾಲವಿಲ್ಲ ಎಂದು ಮುಂತಾಗಿ ಮನಸ್ಸು ಯೋಚಿಸತೊಡಗುತ್ತದೆ. ಆ ಶಕ್ತಿಗೆ ಕ್ರಮೇಣ ದೇವರು, ಭಗವಂತ, ಸರ್ವಶಕ್ತ, ಸರ್ವಾಂತರ್ಯಾಮಿ ಮುಂತಾದ ಸಹಸ್ರಾರು ನಾಮಗಳು ಪ್ರಪಂಚಾದ್ಯಂತ ಚಲಾವಣೆಗೆ ಬಂದುವು. (ಮಾನವಮತಿಯ ಅತ್ಯುತ್ಕೃಷ್ಟ ಸೃಷ್ಟಿ ದೇವೆರು) ಎಂದಿದ್ದಾರೆ ನಕ್ಷತ್ರಲೋಕದ ಮಾಂತ್ರಿಕ ಮತ್ತು ನೊಬೆಲ್ ಪ್ರಶಸ್ತಿ ಪುರಸ್ಕೃತ ಸುಬ್ರಹ್ಮಣ್ಯನ್ ಚಂದ್ರಶೇಖರ್! ನಮ್ಮ ಎಲ್ಲ ನಡುವಳಿಕೆಗಳಿಗೆ ಸಾಕ್ಷೀಭೂತವಾಗಿ ನಾವೇ ನಿರ್ಮಿಸಿರುವ ಅದ್ಭುತ ಕಲ್ಪನೆ ದೇವರು. ಈ ನಂಬಿಕೆಯಿಂದ ನಮ್ಮ ಬದುಕು ಹಸನಾಗಬೇಕು ಎಂಬುದೊಂದೇ ಇಲ್ಲಿಯ ಉದ್ದೇಶ.

ಇದರ ಈಡೇರಿಕೆಗಾಗಿ ವಿವಿಧ ಜನಾಂಗಗಳಲ್ಲಿ ವಿವಿಧ ಧರ್ಮಗಳು ಜನಿಸಿ ತಮ್ಮ ತಮ್ಮ ವಿಧಿನಿಷೇಧಗಳನ್ನು ರೂಢಿಸಿಕೊಂಡು ಬರುತ್ತಿವೆ. ನಮ್ಮ ಮನಸ್ಸಿಗೆ ಸ್ವಾಸ್ಥ್ಯವೀವ ದೇವರು, ಧರ್ಮ ಮುಂತಾದ ಭಾವನೆಗಳನ್ನು ನಂಬುವುದು ಬಿಡುವುದು ನಮಗೆ ಸೇರಿದ್ದು. ಇಲ್ಲಿ ಯಾರೂ ಯಾರನ್ನೂ ಬಲವಂತಮಾಡತಕ್ಕದ್ದಲ್ಲ. ಪರಸ್ಪರ ಸಾಮರಸ್ಯಗಳಿಕೆಯೊಂದೇ ಇಲ್ಲಿಯ ಗುರಿ. ದೇವರನ್ನು ನಂಬಿದಾತನೂ ನಂಬದಾತನೂ ಒಟ್ಟಾಗಿ ಸೌಹಾರ್ದದಲ್ಲಿ ಬಾಳುವುದು ಸಾಧ್ಯವಿದೆ. ಆದ್ದರಿಂದ ಧಾರ್ಮಿಕರು ಮಾತ್ರ ಸಜ್ಜನರು, ಉಳಿದವರು ಅಲ್ಲ ಎಂಬಂಥ ಚಿಂತನೆ ಸರ್ವಥಾ ತಪ್ಪು. ಮುಪ್ಪಿನ ಷಡಕ್ಷರಿಗಳ ನುಡಿ ಗಮನಿಸಬೇಕು, "ಅವರವರ ದರುಶನಕೆ ಅವರವರ ವೇಷದಲ್ಲಿ ಅವರವರಿಗೆಲ್ಲ ಗುರು ನೀನೊಬ್ಬನೆ, ಅವರವರ ಭಾವಕ್ಕೆ ಅವರವರ ಪೂಜೆಗಂ ಅವರವರಿಗೆಲ್ಲ ಶಿವ ನೀನೊಬ್ಬನೆ." ಇಲ್ಲಿಯ 'ಗುರು' ಅಥವಾ 'ಶಿವ' ಆಯಾ ವ್ಯಕ್ತಿಯ ನಂಬಿಕೆಯನ್ನು ಆಧರಿಸಿ ದೇವರಾಗಬಹುದು, ಮೌಲ್ಯವಾಗಬಹುದು, ಜೀವನಧರ್ಮವಾಗಬಹುದು ಅಥವಾ ಅಸೀಮ ಧಾರ್ಮಿಕ ಅನುಭವವೇ ಆಗಬಹುದು.

ವ್ಯಕ್ತಿಯಲ್ಲಿ ಧಾರ್ಮಿಕ ಸಂವೇದನೆ ಉಗಮಿಸುವ ಅದೇ ಮೂಲದಿಂದ ಸೌಂದರ್ಯ ಪ್ರಜ್ಞೆಯೂ ಉದ್ಭವಿಸುತ್ತದೆ. ಇದರ ಅಭಿವ್ಯಕ್ತಿ ಪ್ರಕಾರಗಳು ಸಂಗೀತ,

ಶಿಲ್ಪ, ನಾಟ್ಯ ಚಿತ್ರಣ ಮುಂತಾದ ವಿವಿಧ ಕಲೆಗಳು. ಇವುಗಳಲ್ಲಿ ವ್ಯವಹರಿಸುವಾತನಿಗೆ ಭಗವಂತನ ಅಥವಾ ಧರ್ಮದ ಅನಿವಾರ್ಯತೆ ಏನೂ ಇಲ್ಲ. ಪುನಃ ಅವನವನ ನಂಬಿಕೆಗೆ ಸೇರಿದ ವಿಚಾರಗಳಿವು. ಹಾಗಾದರೆ ಸಂಗೀತದಲ್ಲಿ ಬಿತ್ತರಿಸುವ ಭಗವಂತನ ಮಹಿಮೆ, ಶಿಲ್ಪಗಳಲ್ಲಿ ಕೆತ್ತುವ ದೇವರ ಪ್ರತಿಮೆ ಮುಂತಾದವುಗಳಿಗೆ ಏನರ್ಥ? ಇವು ಆಯಾ ಕಲಾವಿದನ ಸೌಂದರ್ಯದೃಷ್ಟಿಗೆ ಸಂಬಂಧಿಸಿದ ಪುನಸ್ಸೃಷ್ಟಿಗಳು ಎಂದು ಗಮನಿಸಬೇಕೇ ವಿನಾ ಆಸ್ತಿಕತೆ, ನಾಸ್ತಿಕತೆ ಮುಂತಾದ ಅನ್ಯ ದೃಷ್ಟಿಗಳಿಂದ ಅಲ್ಲ.

ಸಾರತಃ ಧರ್ಮವು ಜೀವನಮೌಲ್ಯಗಳ ಮೊತ್ತ. ಇದು ಅಮೂರ್ತ. ವಿಜ್ಞಾನವಾದರೋ ಮೂರ್ತ ಜಗತ್ತಿಗೆ ಸಂಬಂಧಿಸಿದ ವ್ಯವಹಾರ. ಇವೆರಡೂ ಮಾನವಸೃಷ್ಟಿಗಳೆಂಬುದನ್ನು ಮರೆಯಬಾರದು. ಮಾನವಜೀವನಕ್ಕೊಂದು ಗುರಿ ಇರಬೇಕು. ಧರ್ಮ ಇದನ್ನು ಮಾನವನೆದುರು ಎತ್ತಿ ಹಿಡಿಯುತ್ತದೆ. ಈತ ಇದರತ್ತ ಸಾಗಲು ಸ್ವಪ್ರಯತ್ನದಿಂದ ಹಾದಿ ಕಂಡು ಹಿಡಿಯಬೇಕು. ಇದು ವಿಜ್ಞಾನದ ಕೆಲಸ. ಇಂಥ ಪ್ರಯತ್ನ ಕಲಾತ್ಮಕವಾಗಿರುವಾಗ ಆತನ ಶ್ರಮ ಸಾರ್ಥಕವಾಗುತ್ತದೆ. ಇಲ್ಲವಾದರೆ ಅದು ವಿಫಲವಾಗುತ್ತದೆ. ಅಂದರೆ, ಗುರಿ ಮತ್ತು ದಾರಿಯ ಸಂಯೋಜನೆ ಕಲಾಪೂರ್ಣವಾಗಿರುವಾಗ ಬದುಕು ಬಂಗಾರವಾಗುತ್ತದೆ. ಐನ್‌ಸ್ಟೈನರ ನುಡಿಗಳಲ್ಲಿ, "ಧರ್ಮರಹಿತ ವಿಜ್ಞಾನ ಪಂಗು, ವಿಜ್ಞಾನರಹಿತ ಧರ್ಮ ಅಂಧ" ಧರ್ಮ ಮತ್ತು ವಿಜ್ಞಾನಗಳ ಮಧುರ ಮೇಳನವೇ ಋಜುಜೀವನದ ಸಾರ. ಈ ಮೇಳನವನ್ನು ಸಾಧಿಸುವ ಇನ್ನೊಂದು ಮಾನವಸೃಷ್ಟಿ ಕಲೆ. ಕಲಾರಿಕ್ತ ಜೀವನ ಶುದ್ಧ ಯಾಂತ್ರಿಕ ಮತ್ತು ನೀರಸ.

ಜಟಕಾಬಂಡಿಯ ಬದುಕಿನ ಗಾಲಿಗಳು ಮಾನವೀಯತೆ, ನೈತಿಕತೆ, ವೈಚಾರಿಕತೆ ಮತು ವೈಜ್ಞಾನಿಕತೆ, 'ಕುದುರೆ'ಗಳುವ್ಯಕ್ತಿಯ ಇಂದ್ರಿಯಸಂವೇದನೆಗಳು, 'ಸಾಹೇಬ' ಆಯಾ ಸವಾರ. ದಾರಿ? ಸಮಗ್ರ ವಿಶ್ವ, ಇಂಗ್ಲಿಷಿನ ಒಂದೂ ಸೂಕ್ತಿ ಹೇಳುತ್ತದೆ (ಪರಿವ್ರಾಜಕಾ! ಪಥ ನಿನಗೆ ದತ್ತವಾಗಿಲ್ಲ. ನೀನಡೆದು ಅದನ್ನು ರೂಪಿಸಬೇಕು.) ದಾಸರ ನುಡಿ "ದಾರಿ ಯಾವುದಯ್ಯಾ ವೈಕುಂಠಕೆ ದಾರಿ ತೋರಿಸಯ್ಯಾ" ಇದೇ ಭಾವವನ್ನು ಮಿಡಿಯುತ್ತದೆ. ವ್ಯಕ್ತಿಯ ನಂಬಿಕೆ, ಆಸಕ್ತಿ, ವೃತ್ತಿ, ಅಂತಸ್ತು ಮುಂತಾದವು ಏನೇ ಇರಲಿ ಅಂತಿಮ ನಿರ್ಣಾಯಕ ಒಂದೇ: ಆತ ಸಾಮಾಜಿಕವಾಗಿಉಪಕಾರಿಯೇ. ಪ್ರಸ್ತುತನೇ. ದ್ರೋಹಿಯಲ್ಲವಷ್ಟೆ ಅನೀತಿವಂತನಲ್ಲವಷ್ಟೆ? ಉತ್ತರ ಹೌದು ಎಂದಾದರೆ ಆತನನ್ನು ಒಪ್ಪಿಕೊಳ್ಳೋಣ ನಮ್ಮ ವೈಯಕ್ತಿಕ ಅಭಿಪ್ರಾಯಗಳು ಏನೇ ಇದ್ದರೂ; ಅಲ್ಲವೆಂದಾದರೆ ಆತ ಎಂಥ ಧಾರ್ಮಿಕನಾಗಿದ್ದರೂ, ದಾನಶೂರನಾಗಿದ್ದರೂ, ದೇವಮಾನವನಾಗಿದ್ದರೂ ಆತನನ್ನು ಎರಡನೆಯ ಯೋಚನೆ ಇಲ್ಲದೇ ನಿರಾಕರಿಸೋಣ. ಮುತ್ತುಸ್ವಾಮಿ ದೀಕ್ಷಿತರ ಈ ಪಂಕ್ತಿ ಸದಾ ನಮಗೆ ದಾರಿದೀಪವಾಗಲಿ. "ಹಿರಣ್ಮಯೀಂ ಲಕ್ಷ್ಮೀಂ ಸದಾ ಭಜಾಮಿ ಹೀನ ಮಾನವಾಶ್ರಯಂತ್ಯಜಾಮಿ." (ಶಾಶ್ವತ ಜೀವನಮೌಲ್ಯವನ್ನು ಆರಾಧಿಸೋಣ, ವಾಮಮಾರ್ಗವನ್ನು ತ್ಯಜಿಸೋಣ.)

***

ಕುಂಟರ ಮನೆ: ಒಂದು ಮಧುರ ನೆನಪು

-ಗಿರಿಜಾ ಕೌಲಗಿ

ವಾಡಿಕೆಯಂತೆ ಒಂದು ಸೋಮವಾರ ಬೆಳಿಗ್ಗೆ ೧೦.೩೦ರ ಖಾಸಗಿ ಬಸ್ಸಿನಲ್ಲಿ ಜನಪದ ಸೇವಾ ಟ್ರಸ್ಟಿನ ಹೊಸ ಜೀವನ ದಾರಿ ಕೇಂದ್ರದಲ್ಲಿ ನಡೆಯುತ್ತಿರುವ ಖಾದಿ ಉತ್ಪಾದನಾ ಕೇಂದ್ರಕ್ಕೆ ಭೇಟಿಕೊಡಲು ಹೊರಟಿದ್ದೆ. ಬಸ್ಸಿನಲ್ಲಿ ಇದ್ದವರೆಲ್ಲರೂ ಅಕ್ಕಪಕ್ಕದ ಹಳ್ಳಿಯವರೆ. ನನಗಂತೂ ಅವರೊಟ್ಟಿಗೆ ಪ್ರಯಾಣಿಸುವಾಗ ಬಹಳ ಸಂತೋಷವಾಗುತ್ತದೆ. ಇನ್ನೇನು ಕೇಂದ್ರ ಸಿಗಬೇಕು. ಅಷ್ಟರಲ್ಲಿ ಬಸ್ಸಿನ ಕ್ಲೀನರ್ ಜೋರಾಗಿ, "ಯಾರ್ರೀ ಕುಂಟರ ಮನೆ" ಅಂದ. ಈ ಸ್ಥಳಕ್ಕೆ ಖಾಸಗಿ ಬಸ್ಸಿನವರು ಅನಧಿಕೃತವಾಗಿ ನಾಮಕರಣ ಮಾಡಿ ಅದನ್ನೆ ಚಾಲ್ತಿಯಲ್ಲಿಟ್ಟಿದ್ದಾರೆ ತಕ್ಷಣ ನನ್ನ ಮನಸ್ಸು ೪೦ ವರ್ಷ ಹಿಂದಕ್ಕೆ ಹೋಯಿತು.

ಜನಪದ ಸೇವಾ ಟ್ರಸ್ಟ್ ಸರ್ವೋದಯ ವಿಚಾರದಲ್ಲಿ ಆಸಕ್ತಿ ಇಟ್ಟಿರುವ ಸಂಸ್ಥೆ ಅದಕ್ಕಾಗಿ ಮುಂದೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಲು ಅನುಕೂಲವಾಗಲೆಂದು ಮೇಲುಕೋಟೆಯಿಂದ ಸುಮಾರು ೭ ಕಿ.ಮಿ. ದೂರದಲ್ಲಿ ಸುಮಾರು ೨೨ ಎಕರೆ ಖುಷ್ಕಿ ಜಮೀನನ್ನು ದುಡ್ಡು ಸಿಕ್ಕಾಗ ಕೊಟ್ಟು ಮೇಲುಕೋಟೆ ಕರೀಗೌಡರಿಂದ ಟ್ರಸ್ಟಿಗೆ ಈ ಜಮೀನನ್ನು ಖರೀದಿಸಿದ್ದೆವು. ಆಗ ಈ ಭೂಮಿಯಲ್ಲಿ ಒಂದೇ ಒಂದು ಗಿಡವೂ ಇರಲಿಲ್ಲ, ಒಂದು ಅಳಲೆ ಮರದ ಹೊರತಾಗಿ. ಇಡೀ ಭೂ ಪ್ರದೇಶವು ಬೆಂಗಾಡಾಗಿತ್ತು. ಎಲ್ಲಿಯೂ ನೀರಿನ ಸುಳಿವಿರಲಿಲ್ಲ, ಬಸ್ ಸಂಚಾರವೂ ಇರಲಿಲ್ಲ, ಉದ್ದಕ್ಕೂ ಮಣ್ಣಿನ ರಸ್ತೆಯಿತ್ತು. ಇನ್ನೂ ಹೆಸರಿಡದ ಜಮೀನಿನಲ್ಲಿ ಅಕ್ಕಪಕ್ಕದ ಹಳ್ಳಿಯವರು ದನಕರುಗಳನ್ನು, ಕುರಿಗಳನ್ನು ಮೇಯಿಸುತ್ತಿದ್ದರು.

ಆ ಸಮಯದಲ್ಲಿ ಮೇಲುಕೋಟೆಯಲ್ಲಿ ವಯಸ್ಕ ಮಹಿಳೆಯರಿಗಾಗಿ ಎಸ್.ಎಸ್.ಎಲ್.ಸಿ. ಗೆ ಖಾಸಗೀ ವಿದ್ಯಾರ್ಥಿಯಾಗಿ ಕೂರಿಸಲು ಸಂಕ್ಷಿಪ್ತ ಶಿಕ್ಷಣ ಶಾಲೆ ನಡೆಸುತ್ತಿದ್ದೆವು. ಇದು ಸೆಂಟ್ರಲ್ ಸೋಷಿಯಲ್ ವೆಲ್ ಫೇರ್ ಬೋರ್ಡಿನ ಒಂದು ಯೋಜನೆ. ಎರಡು ವರ್ಷದ ಒಂದು ಅವಧಿಯಲ್ಲಿ ೨೫ ಜನ ಮಹಿಳೆಯರು ಇರುತ್ತಿದ್ದರು. ಜೀವನದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿ ವಿದ್ಯಾಭ್ಯಾಸವನ್ನು ನಿಲ್ಲಿಸಿದ್ದವರು. ಇಂಥವರು ವಿದ್ಯಾಭ್ಯಾಸ ಮುಂದುವರೆಸಲು ಬಹಳ ಒಳ್ಳೆಯ ಯೋಜನೆ ಇದಾಗಿತ್ತು. ನಾವು ಸುಮಾರು ೫ ಬ್ಯಾಚ್ ನಡೆಸಿದೆವು. ಈ ಯೋಜನೆಯ ಆಶ್ರಯದಲ್ಲಿ ಸುಮಾರು ೧೨೫ ಮಹಿಳೆಯರು ಪ್ರಯೋಜನ ಪಡೆದು ಉದ್ಯೋಗಗಳನ್ನು ಪಡೆದುಕೊಂಡು ಅವರ ಕಾಲ ಮೇಲೆ ಅವರು ನಿಂತುಕೊಂಡಿದ್ದಾರೆ. ಈಗಲೂ ಸಹ ಅವರಲ್ಲಿ ಕೆಲವರು ಟ್ರಸ್ಟಿನೊಡನೆ

ಸಂಪರ್ಕವಿಟ್ಟುಕೊಂಡಿದ್ದಾರೆ. ಪ್ರತಿ ಭಾನುವಾರ ನಾನೂ ಆ ವಿದ್ಯಾರ್ಥಿನಿಯರೊಂದಿಗೆ ಸೇರಿ ನಡೆದುಕೊಂಡು ಜಮೀನಿಗೆ ಬಂದು ಸಂಜೆವರೆಗೂ ಹೊಲದಲ್ಲಿ ಕೆಲಸಮಾಡುತ್ತಿದ್ದೆವು. ಕಲ್ಲಂಗಡಿ ಹಣ್ಣುಗಳನ್ನು ಹಾಗೂ ಕಡ್ಲೆಕಾಯಿಯನ್ನು ಸಹ ಬೆಳೆದಿದ್ದೆವು. ಬೆಳಿಗ್ಗೆ ೯.೩೦ರ ಸುಮಾರಿಗೆ ಕೆಲಸ ಶುರುಮಾಡುತ್ತಿದ್ದೆವು. ರೋಜಾ ಮೇಳೆ ಇತ್ಯಾದಿಗಳನ್ನು ಕಡಿದು ಹಾಕಿ ಅಲ್ಲಲ್ಲೇ ಬಿದಿದ್ದ ಕಾಡುಗಲ್ಲುಗಳನ್ನು ಆರಿಸಿತಂದು ಕಲ್ಲೀಡನ್ನು ಕಟ್ಟುತ್ತಿದ್ದೆವು. ಮಧ್ಯಾಹ್ನ ೧.೩೦ಕ್ಕೆ ಕೆಲಸ ನಿಲ್ಲಿಸಿ ೨೫ ಜನರೂ ಒಟ್ಟಿಗೆ ಕೂತು ತಂದಿದ್ದ ಬುತ್ತಿಯನ್ನು ಬಿಚ್ಚಿ ಅಳಲೆ ಮರದ ನೆರಳಿನಲ್ಲಿ ಊಟಮಾಡುತ್ತಿದ್ದೆವು. ಊಟಮಾಡುವಾಗ ಅನೇಕ ತಮಾಷೆಯ ಮಾತುಗಳನ್ನು ಆಡುತ್ತಿದ್ದೆವು. ಅವರಲ್ಲಿ ಕೆಲವರು ಕೊಡಗಿನ ವಿದ್ಯಾರ್ಥಿನಿಯರು ಇದ್ದುದರಿಂದ ನಾನು ಕೊಡಗು ಭಾಷೆಯನ್ನು ಸಹಜವಾಗಿ ಕಲಿತೆನು. ಈಗಲೂ ಅದನ್ನು ಮಾತನಾಡುವ ಅಭ್ಯಾಸವನ್ನಿಟ್ಟುಕೊಂಡಿದ್ದೇನೆ. ಮತ್ತೆ ೨.೦೦ಗಂಟೆಗೆ ಕೆಲಸ ಶುರು. ನಾಲ್ಕು ಗಂಟೆಯವರೆಗೆ ಕೆಲಸ ಮಾಡಿ ಅಲ್ಲಿಯೆ ಇದ್ದ ಮೂರು ಕಲ್ಲನ್ನು ಒಲೆಯ ಆಕಾರದಲ್ಲಿಟ್ಟು ಸಣ್ಣ ಪುಟ್ಟ ಪುಳ್ಳೆ–ಪುಸುಕನ್ನು ಹಾಕಿ ಒಲೆ ಹಚ್ಚಿ ಟೀ ಮಾಡಿ ಕುಡಿಯುತ್ತಿದ್ದೆವು. ಅಂಥ ರುಚಿಯ ಟೀ ಈಗ ಯಾವ ಒಳ್ಳೆಯ ಹೋಟೆಲಿನಲ್ಲೂ ಸಿಗುವುದಿಲ್ಲ.

ಒಮ್ಮೆ ಹೊಸ ಜೀವನ ದಾರಿಯಲ್ಲಿ ಸರ್ವಿಸ್ ಇಂಟರ್‌ನ್ಯಾಷನಲ್ ಎಂಬ ಜಾಗತಿಕ ಮಟ್ಟದ ಸೇವಾಸಂಸ್ಥೆಯು ಅಂತರರಾಷ್ಟ್ರೀಯ ಶಿಬಿರವನ್ನು ಏರ್ಪಡಿಸಿತ್ತು. ಅವರು ತಮ್ಮ ಶಿಬಿರದ ಅವಧಿಯಲ್ಲಿ ತೆಂಗಿನ ಸಸಿಗಳನ್ನು ನೆಟ್ಟಿದ್ದರು. ನಾವು ವಿದ್ಯಾರ್ಥಿನಿಯರು ಮೇಲುಕೋಟೆಯಿಂದ ನಡೆದುಕೊಂಡು ಹೋಗಿ ಆ ತೆಂಗಿನ ಗಿಡಗಳಿಗೆ ಪಕ್ಕದ ಹಳ್ಳದಿಂದ ನೀರು ತಂದು ಹಾಕುತ್ತಿದ್ದೆವು. ಈಗ ಆ ಗಿಡಗಳೆಲ್ಲವೂ ಫಲಕ್ಕೆ ಬಂದಿವೆ, ಅದನ್ನು ನೋಡುವುದೇ ನನಗೆ ಸಂತೋಷ. ಈ ಎಲ್ಲ ಕೆಲಸ ಮಾಡಲು ಯಾರಿಗೂ, ಯಾರಿಂದಲೂ ಒತ್ತಾಯವಿರಲಿಲ್ಲ. ಅವರೆಲ್ಲ ಸ್ವಯಂಸೇವಕರಂತಿದ್ದರು. ಬಹಳ ಸಂತೋಷದಿಂದ ಕೆಲಸ ಮಾಡುತ್ತಿದ್ದರು. ಇದೇ ತರಹ ೫ ಬ್ಯಾಚಿನ ಹುಡುಗಿಯರು ಕೆಲಸ ಮಾಡಿದ್ದಾರೆ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳು. ಆ ಸಮಯದಲ್ಲಿ ಪ್ರಾರಂಭಿಸಲಾಗಿದ್ದ ಕರುಣಾಗೃಹದ ವಿದ್ಯಾರ್ಥಿ ಪಿ.ಎಲ್, ಕುಮಾರಸ್ವಾಮಿ ಯವರು ಒಂಟೆತ್ತಿನಗಾಡಿಯಲ್ಲಿ ನಮ್ಮೊಟ್ಟಿಗೆ ಬರುತ್ತಿದ್ದರು. ಅವರಿಗೆ ಪೋಲಿಯೊದಿಂದ ಕಾಲುಗಳು ಹೋಗಿದ್ದವು ಸೊಂಟದ ಕೆಳಗೆ ಶಕ್ತಿಯೆ ಇರಲಿಲ್ಲ ತಮ್ಮ ಕೈಗಳನ್ನು ನೆಲದ ಮೇಲೆ ಊರಿ ಮುಂದೆ ಸರಿಯುತ್ತಿದ್ದರು. ಇವರು ಮೂಲತಃ ಮಂಗಳೂರಿನವರು. ವ್ಯವಸಾಯದಲ್ಲಿ ಬಹಳ ಆಸಕ್ತಿ, ಜೊತೆಗೆ ಪುಸ್ತಕ ಪತ್ರಿಕೆ ಓದುವ ಹವ್ಯಾಸ. ಹೀಗೆ ಅನೇಕ ಅಭಿರುಚಿಗಳನ್ನು ಹೊಂದಿದ್ದ ಕುಮಾರ್ ಬಹಳ ಸಾಹಸಿ.

ಕುಮಾರ್ ಮತ್ತು ಸುರೇಂದ್ರ ಇಬ್ಬರು ಮಾತಾಡಿ ಪ್ರತಿ ಭಾನುವಾರ ಮೇಲುಕೋಟೆಯಿಂದ ಜಮೀನಿಗೆ ಬರುವ ಬದಲು ಅಲ್ಲೇ ಸಣ್ಣದೊಂದು ಗುಡಿಸಲನ್ನು ಹಾಕಿಕೊಂಡು ನಂತರ ವಯಸ್ಕ ಅಂಗವಿಕಲರಿಗಾಗಿ ವ್ಯವಸಾಯ, ಚಾಪೆನೇಯುವುದು, ಹೈನುಗಾರಿಕೆ, ಜೇನುಸಾಕಾಣಿಕೆ ಹೀಗೆ ಅನೇಕ ಉದ್ಯೋಗಗಳಲ್ಲಿ ಅಂಗವಿಕಲರನ್ನು ತೊಡಗಿಸಿ ಅವರ ಕಾಲ ಮೇಲೆ ಅವರು ನಿಂತು ಸ್ವಾವಲಂಬಿಗಳನ್ನಾಗಿ ಮಾಡುವುದೆಂದು ವಿಚಾರ ಮಾಡಿದರು. ನಮ್ಮಲ್ಲಿದ್ದ ಅಂಗವಿಕಲರೆಲ್ಲ ಗ್ರಾಮಾಂತರ ಪ್ರದೇಶದಿಂದ ಬಂದವರೆ ಆಗಿದ್ದರು. ಅಂದೇ ಹೊಸ ಜೀವನ ದಾರಿ (ವಯಸ್ಕ ಅಂಗವಿಕಲರ ಪುನರ್ವಸತಿ ಕೇಂದ್ರ) ಎಂದು ಜಮೀನಿಗೆ ನಾಮಕರಣವಾಯಿತು. ಇದಾದ ಕೆಲವೇ ದಿನಗಳ ನಂತರ ಒಂದು ಬೆಳದಿಂಗಳ ರಾತ್ರಿ ಕುಮಾರಸ್ವಾಮಿ ಮತ್ತು ಮೈಸೂರಿನ ಮಂಜುನಾಥ್ ಸುಮಾರು ಸಂಜೆ ೭ ಗಂಟೆಗೆ ಹೊಸ ಜೀವನ ದಾರಿ ಕೇಂದ್ರಕ್ಕೆ ಒಂಟೆತ್ತಿನ ಗಾಡಿ ಕಟ್ಟಿಕೊಂಡು ಹೊರಟೇಬಿಟ್ಟರು ನಾನಂತು ಬಹಳ ವಿರೋಧ ಮಾಡಿದೆ ಅದಕ್ಕೆ ಕೌಲಗಿಯವರು "ಹುಡುಗರು ಸಾಹಸ ಮಾಡಲು ಹೊರಟಿದ್ದಾರೆ. ಏಕೆ ನಿರಾಶೆ ಮಾಡುತ್ತಿ ಹೋಗಲಿ ಬಿಡು ಅಂದರು" ನಾನು ಅಳುತ್ತಾ ಮನೆಯ ಹಿಂದೆ ಕೂತಿದ್ದೆ. ಆಗ ಕೌಲಗಿಯವರು "ಏಕೆ ಅಳುತ್ತಿ ಬೇಕಿದ್ದರೆ ನಡೆ ಹೋಗಿ ನೋಡಿಕೊಂಡು ಬರೋಣವೆಂದರು" ತಕ್ಷಣ ಅಳುಮುಖವನ್ನು ಒರೆಸಿಕೊಂಡು ಸರಸರ ಅವರೊಟ್ಟಿಗೆ ರಾತ್ರಿ ೮ ಗಂಟೆಯಲ್ಲಿ ನಿರ್ಜನವಾದ ದಾರಿಯಲ್ಲಿ ಹೊಸಜೀವನ ದಾರಿ ಕೇಂದ್ರದ ಕಡೆಗೆ ಹೊರಟೆವು. ನಾವು ೯ ಗಂಟೆಗೆ ಅಲ್ಲಿಗೆ ಹೋದಾಗ ಕುಮಾರ್ ಮತ್ತು ಮಂಜುನಾಥ್‌ರವರಿಗೆ ಸ್ವಲ್ಪ ಗಾಬರಿಯಾಯಿತು. ಆಗಲೆ ನೆಲ ಗುಡಿಸಿ ಈಚಲಚಾಪೆ ಹಾಸಿ ಮಲಗಲು ಸಿದ್ಧವಾಗಿದ್ದರು. ಏಕೆ ಬಂದಿರಿ ಎಂದರು. "ನಿಮ್ಮಮ್ಮನ ಸಮಾಧಾನಕ್ಕೆ ಕರೆದುಕೊಂಡು ಬಂದೆ ಇಲ್ಲದಿದ್ದರೆ ರಾತ್ರಿಯೆಲ್ಲ ಅವರು ನಿದ್ದೆಯನ್ನು ಮಾಡುತ್ತಿರಲಿಲ್ಲವೆಂದರು" ನೀವೇನು ಹೆದರಿಕೊಳ್ಳಬೇಡಿರಮ್ಮ ನಾವು ಧೈರ್ಯದಿಂದ ಹಾಗೂ ಬಹಳ ಸಂತೋಷದಿಂದ ಇದ್ದೇವೆ ನೀವು ಹೊರಡಿ ಎಂದರು" ನಾವು ಅಲ್ಲಿಂದ ಹಿಂದುರಿಗಿ ನೋಡುತ್ತಾ ನೋಡುತ್ತಾ ಮೇಲುಕೋಟೆಗೆ ಹೊರಟೆವು ಆಗ ರಾತ್ರಿ ೧೦.೩೦.

ಒಂದು ದಿನ ಕುಮಾರಸ್ವಾಮಿಯವರು ಮೇಲುಕೋಟೆಯಿಂದ ಜೋಡೆತ್ತಿನ ಗಾಡಿ ಕಟ್ಟಿಕೊಂಡು ಸಂಜೆ ಒಬ್ಬರೇ ಹೊರಟರು ದಾರಿಯ ಮಧ್ಯದಲ್ಲಿ ಒಂದು ಇಳಿಜಾರಿನಲ್ಲಿ ಒಂದು ಎತ್ತು ತನ್ನ ಕೊರಳನ್ನು ನೊಗದಿಂದ ತೆಗೆದು ಹಾಕಿತು. ಗಾಡಿ ಸ್ವಲ್ಪ ದೂರ ಹೋಗಿ ನಿಂತಿತು. ಆ ಸಮಯದಲ್ಲಿ ಅಲ್ಲಿ ಯಾರು ಇರಲಿಲ್ಲ ಆಗ ಕುಮಾರಸ್ವಾಮಿಯವರು ಧೈರ್ಯಗೆಡದೆ ಸ್ವಲ್ಪ ಮುಂದಕ್ಕೆ ತೆವಳಿ ಬಂದು ಹತ್ತಿರದಲ್ಲಿದ್ದ ಒಬ್ಬ ಮುಸಲ್ಮಾನರ ಕುಟುಂಬಕ್ಕೆ ತಿಳಿಸಿದರು ಅವರು ಬಂದು ಪುನಃ ಗಾಡಿ ಕಟ್ಟಿ ಕುಮಾರ್‌ರವರನ್ನು ಗಾಡಿಯಲ್ಲಿ ಕುಳ್ಳಿರಿಸಿ ಕೇಂದ್ರಕ್ಕೆ ತಲುಪಿಸಿದರು. ಈ ವಿಷಯ ನಮಗೆ ಮಾರನೆ ದಿನ ಬೆಳಿಗ್ಗೆ ಗೊತ್ತಾಯಿತು. ಕುಮಾರಸ್ವಾಮಿ

ನಿಜವಾಗಿಯೂ ಒಬ್ಬ ಸಾಹಸಿ, ಅವರ ಬಗ್ಗೆ ಕೌಲಗಿಯವರು ಮುಂದೆ ತಮ್ಮ ಅನುಭವದ ಲೇಖನದ ಮಾಲೆಯಲ್ಲಿ ತಿಳಿಸುವರು.

ಕುಮಾರಸ್ವಾಮಿಯವರೊಂದಿಗೆ ಇದ್ದ ಇನ್ನೊಬ್ಬ ಅಂಗವಿಕಲ ಹನುಮಂತ. ಹೆಸರು ಹನುಮಂತನೆಂದು ಇದ್ದರೂ ಸರಿದಾಡಲು ಸಹ ಆಗದಷ್ಟು ದುರ್ಬಲವಾಗಿದ್ದ. ಇವರಿಗೆ ಅಲ್ಲಿ ಉದ್ಯೋಗ ಕಲ್ಪಸಲು ಸಣ್ಣದೊಂದು ನ್ಯಾಯಬೆಲೆ ಅಂಗಡಿ ಹಾಕಿಕೊಟ್ಟಿದ್ದೆವು ಈ ಅಂಗಡಿಯ ಹೆಸರು "ನಮ್ಮ ಅಂಗಡಿ".

೧೯೮೧ ನ್ನು ಅಂತರರಾಷ್ಟ್ರೀಯ ಅಂಗವಿಕಲ ವರ್ಷವೆಂದು ಸರ್ಕಾರ ಘೋಷಿಸಿತ್ತು. ಈ ಸಂದರ್ಭದಲ್ಲಿ ಅಂಗವಿಕಲರಿಗಾಗಿ ಕೆಲಸ ಮಾಡುತ್ತಿರುವ ವ್ಯಕ್ತಿಗಳು, ಸಂಸ್ಥೆಗಳು, ಅಂಗವಿಕಲ ಸಾಹಸಿಗಳು ಯಾರಾದರೂ ಇದ್ದರೆ ತಿಳಿಸಿ ಎಂಬ ಪ್ರಕಟಣೆ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಅದಕ್ಕೆ ಉತ್ತರವಾಗಿ ಸಂತೋಷ್ ಕೌಲಗಿ ಪಿ.ಎಲ್. ಕುಮಾರಸ್ವಾಮಿಯವರನ್ನು ಪರಿಚಯಿಸಿದರು ಕೆಲವು ದಿನಗಳು ಕಳೆದ ಮೇಲೆ ಸುಧಾ ಪತ್ರಿಕೆಯ ಆನಂದ್ ಮತ್ತು ಅವರ ಸಂಗಡಿಗರೊಬ್ಬರು ಮೇಲುಕೋಟೆಗೆ ಬಂದು ನಮ್ಮನ್ನು ಭೇಟಿ ಮಾಡಿ ಹೆಚ್ಚಿನ ವಿಚಾರ ತಿಳಿದರು. ಸುಧಾ ಪತ್ರಿಕೆಯಲ್ಲಿ ಅಂತರರಾಷ್ಟ್ರೀಯ ಅಂಗವಿಕಲರ ವರ್ಷಕ್ಕೆಂದು ಒಂದು ಲೇಖನವನ್ನು ಅಂಗವಿಕಲರ ಬಗ್ಗೆ ಮಾಡಬೇಕೆಂದಿದ್ದೇವೆ ಎಂದರು. ನಮ್ಮ ಸಂಸ್ಥೆಯಲ್ಲೆಲ್ಲ ಸುತ್ತಾಡಿ, ನಮ್ಮ ಸಂಸ್ಥೆಯ ವಿಚಾರ, ಉದ್ದೇಶಗಳನ್ನು ತಿಳಿದುಕೊಂಡು ಕೊನೆಗೆ ಸಂಸ್ಥೆಯ ಪರಿಚಯವನ್ನು ಮಾಡುವುದಾಗಿ ಹೇಳಿ ಎರಡು ಕೈಗಳಿಲ್ಲದಿದ್ದರಿಂದ ಕಾಲಿನಲ್ಲಿ ಬರೆಯುತ್ತಿದ್ದ ಆಗುಂಬೆ ಸುರೇಶ್ ಎಂಬ ಅಂಗವಿಕಲ ವಿದ್ಯಾರ್ಥಿಯ ಒಂದು ಭಾವಚಿತ್ರವನ್ನು ತೆಗೆದುಕೊಂಡು ಹೋದರು. ೧೫ ದಿನಗಳ ನಂತರ ಸುರೇಶನ ಭಾವಚಿತ್ರವನ್ನು ಮುಖಪುಟದ ಮೇಲೆ ಛಾಪಿಸಿ ಸಂಸ್ಥೆಯ ಬಗ್ಗೆ ಸುಧೀರ್ಘ ಪರಿಚಯವನ್ನು ಬರೆದಿದ್ದರು. ಅದುವರೆಗೆ ಅಂದರೆ ೨೧ ವರ್ಷಗಳ ಕಾಲ ಎಲೆಮರೆ ಕಾಯಿಯಂತೆ ಇದ್ದು ಸೇವಾಕಾರ್ಯವನ್ನು ಮಾಡುತ್ತಿದ್ದ ನಮ್ಮ ಸಂಸ್ಥೆಯ ಪರಿಚಯವನ್ನು ಇಡೀ ಕರ್ನಾಟಕಕ್ಕೆ ಪಸರಿಸಿದರು. ಶುರುವಾಯಿತು ನೋಡಿ ಪತ್ರಗಳ ರಾಶಿಯೊ ರಾಶಿ. ಜೊತೆಗೆ ಆರ್ಥಿಕ ಸಹಾಯ ಹಾಗೂ ಪ್ರತ್ಯಕ್ಷ ನೋಡಲು ಬರುತ್ತಿದ್ದ ಅಭಿಮಾನಿಗಳ ತಂಡ. ಹೊರನಾಡ ಕನ್ನಡಿಗರು ಸಹ ಸುಧಾ ಪತ್ರಿಕೆಯನ್ನು ನೋಡಿ ಬಹಳ ಸಹಾಯವನ್ನು ಮಾಡಿದ್ದಾರೆ. ಇವರೆಲ್ಲರ ಪ್ರೀತಿಯ ಮಹಾಪೂರದಲ್ಲಿ ಸಧ್ಯ ನಾವು ಕೊಚ್ಚಿಹೊಗಲಿಲ್ಲ. ಇದೊಂದು ಜನಾಧಾರಿತ ಸಂಸ್ಥೆಯೆಂದು ಸ್ಪಷ್ಟವಾಯಿತು. ಸಮಾಜದ ಮನ್ನಣೆಗಿಂತ ಬೇರೆಯೆಲ್ಲ ಪ್ರಶಸ್ತಿಯೂ ಚಿಕ್ಕದಾಗುತ್ತದೆ. ಹೊಸಜೀವನ ದಾರಿ ಕೇಂದ್ರಕ್ಕಾಗಿ ಹಗಲೂ ರಾತ್ರಿಯೆನ್ನದೆ ನಿಸ್ವಾರ್ಥವಾಗಿ ದುಡಿದ ಅಂಗವಿಕಲರು; ಪಿ.ಎಲ್.ಕುಮಾರಸ್ವಾಮಿ, ಹೆಚ್.ಡಿ.ಹನುಮಂತ, ನರಸಿಂಹ, ಮುಕ್ತಂಸಾಬ್, ಶಬೀರ್‌ಖಾನ್, ಮುನಿವೆಂಕಟಯ್ಯ, ಹನುಮಂತಪ್ಪ, ಜಿ.ರಾಚಪ್ಪ, ಮಲ್ಲಿಕಾರ್ಜುನ, ರುದ್ರಮೂರ್ತಿ, ಶ್ರೀನಿವಾಸ,

ಬಾಲಬೈಪಿರೆಡ್ಡಿ, ಕೃಷ್ಣಮೂರ್ತಿ ಹೀಗೆ ಇನ್ನೂ ಅನೇಕ ಅಂಗವಿಕಲರು. ಇವರೆಲ್ಲ ಒಂದೇ ವಿಚಾರದಿಂದ ಇಲ್ಲಿ ಒಟ್ಟಾಗಿದ್ದವರಾಗಿದ್ದರು. ಇನ್ನೂ ಅನೇಕ ಅಂಗವಿಕಲರು ಈ ಸಂಸ್ಥೆಗಾಗಿ ದುಡಿದಿದ್ದಾರೆ. ಎಲ್ಲರ ಹೆಸರು ನನಗೆ ಜ್ಞಾಪಕಕ್ಕೆ ಬರುತ್ತಿಲ್ಲ ಅದಕ್ಕಾಗಿ ವಿಷಾದಿಸುತ್ತೇನೆ.

ಹೊಸ ಜೀವನ ದಾರಿ ಕೇಂದ್ರಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಾಯ ಮಾಡಿದ್ದ ಸಂಘ ಸಂಸ್ಥೆಗಳು ಮತ್ತು ಮಹನೀಯ: ಕೆ.ಎಸ್. ನಾರಾಯಣಸ್ವಾಮಿ ಮೊದಲಿಗರು. ತಮ್ಮ ಅತ್ತೆ ಮಾವನ ಹೆಸರಿನಲ್ಲಿ ಸಣ್ಣದೊಂದು ಮನೆ ಕಟ್ಟಲು ಆರ್ಥಿಕ ಸಹಾಯ ಮಾಡಿದರು ಆ ಮನೆಯೆ ಇಂದಿನ ರಾಧೆಶ್ಯಾಮ್, ಎಸ್.ಸಿ.ಐ, ರಾಷ್ಟ್ರೀಯ ಸೇವಾ ಯೋಜನೆಗಳು, ಇಂಗ್ಲೇಂಡಿನ ಹೆಲ್ಪ್ ಸಂಸ್ಥೆಯ ೧೨ ಕ್ಯಾಂಪುಗಳು(೧೨ ವರ್ಷ) ಬೇಸಿಗೆ ಶಿಬಿರಗಳು, ವೈದ್ಯಕೀಯ ಶಿಬಿರಗಳು, ಸಾವಯವ ಕೃಷಿ ಪರಿಚಯದ ಕ್ಯಾಂಪುಗಳು ಹೀಗೆ ಹತ್ತಾರು ಕ್ಯಾಂಪುಗಳ ಮೂಲಕ ಬಂದ ನೂರಾರು ಸ್ವಯಂ ಸೇವಕರ ಶ್ರಮದ ಫಲವೇ ಇಂದಿನ ಹೊಸಜೀವನ ದಾರಿ. ಈ ಸಮಯದಲ್ಲಿ ನನ್ನ ಹಿರಿಯಮಗ ಸಂತೋಷ್ ಮೈಸೂರಿನ ಜೆ.ಎಸ್.ಎಸ್. ಇಂಜನಿಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದವನು ಅಲ್ಲಿ ಅವನಿಗೆ ಸರಿಯಾದ ಊಟ ಮತ್ತು ವಸತಿಯ ವ್ಯವಸ್ಥೆ ಆಗದೇ ಇದ್ದುದರಿಂದ ಮೂರನೆ ವರ್ಷಕ್ಕೆ ವ್ಯಾಸಂಗವನ್ನು ನಿಲ್ಲಿಸಿ ಟ್ರಸ್ಟಿಗೆ ಬಂದ ಮತ್ತು ಹೊಸ ಜೀವನ ದಾರಿ ಅಭಿವೃದ್ಧಿಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡ. ಹೀಗೆ ಅವನು ೨೫ ವರ್ಷಗಳ ಕಾಲ ತನ್ನ ಜೀವನದ ಅಮೂಲ್ಯ ಪ್ರಾಯವನ್ನು ಸವೆಸಿದ. ಈ ಅವಧಿಯಲ್ಲಿಯೆ ಅವನಿಗೆ ಮದುವೆಯೂ ಆಯಿತು ಮೂರು ಮಕ್ಕಳೂ ಆದರು. ಹೀಗೆ ಎಲ್ಲರ ದುಡಿಮೆಯ ಫಲ ಈಗ ದೊರೆಯುತ್ತಿದೆ.

ಈ ಎಲ್ಲ ವಿಷಯವನ್ನು ಹೇಳುವ ಭರಾಟೆಯಲ್ಲಿ ಮುಖ್ಯವಾಗಿ ನಾನು ಹೇಳಬೇಕಾದ ಖಾದಿ ಉದ್ಯೋಗದಲ್ಲಿಯ ನನ್ನ ಸಹೋದ್ಯೋಗಿಗಳ ಬಗ್ಗೆ ಹೇಳಬೇಕಾದ್ದದ್ದು ಮರೆತು ಹೋಯಿತು ಈಗ ಅದನ್ನು ಇಲ್ಲಿ ಹೇಳುತ್ತೇನೆ. ಜಾನಕಮ್ಮ, ೪೫ ವರ್ಷದ ಪರಿತ್ಯಕ್ತೆ. ಮಕ್ಕಳಿಲ್ಲ, ಅಣ್ಣತಮಂದಿರಿಲ್ಲ, ತಂದೆ ತಾಯಿಗಳಿಗೆ ವಯಸ್ಸಾಗಿದೆ ತಮ್ಮ ಸ್ವಂತ ಜೀವನದೊಂದಿಗೆ ಅವರ ಜೀವನದ ಪೂರ್ಣ ಜವಾಬ್ದಾರಿಯನ್ನು ಇವರೇ ಹೊರಬೇಕಾಗಿದೆ. ಹೊರುತ್ತಿದ್ದಾರೆ ಇವರಿಗೊಮ್ಮೆ ಗರ್ಭಕೋಶದ ತೊಂದರೆಯಾಗಿತ್ತು ಆಗ ನಾನು ಅವರನ್ನು ಶಾಂತವೇರಿ ಗೋಪಾಲಗೌಡ ಆಸ್ಪತ್ರೆಗೆ ಸೇರಿಸಿ ಆಪರೇಷನ್ ಮಾಡಿಸಿದ್ದೆ. ಡಾ॥ ವಿಷ್ಣುಮೂರ್ತಿಯವರಿಗೆ ನಮ್ಮ ಸಂಸ್ಥೆಯ ಪರಿಚಯ ವಿದ್ದುದರಿಂದ ಈ ಸಂದರ್ಭದಲ್ಲಿ ಸ್ವಲ್ಪ ರಿಯಾಯಿತಿ ತೋರಿಸಿದರು ಇದಾದ ನಂತರ ಆರಾಮವಾಗಿದ್ದಾರೆ. ಇವರ ಎತ್ತರ ಸುಮಾರು ೪ ಅಡಿ. ನಾನೊಮ್ಮೆ ಇವರ ಮನೆಗೆ ಸಿಂಗಾಪುರಾಕ್ಕೆ ಹೋಗಿದ್ದೆ ಇದ್ದಕ್ಕಿದ್ದ ಹಾಗೆ ಹೋಗಿದ್ದ ನನ್ನನ್ನು ನೋಡಿ

ಅವರಿಗೆ ಆಶ್ಚರ್ಯ ಮತ್ತು ಸಂತೋಷ ಒಮ್ಮೆಲೆ ಉಂಟಾಯಿತು. ಬಾಗಿಲಲ್ಲೇ ಬಿದ್ದಿದ್ದ ಈಚಲ ಬರಲನ್ನು ಆ ಕಡೆಗೆ ಎಸೆದು, ಬನ್ನಿಅಮ್ಮ ಒಳಗೆ ಎಂದರು. ಅವರು ಹಾಗೆ ಅಂದ ತಕ್ಷಣ ಒಳಗಡೆಯಿಂದ ಇಬ್ಬರು ಹೊರಬರಬೇಕಾಯಿತು. ಮನೆ ಅಷ್ಟು ಚಿಕ್ಕದು. ಮನೆಯ ವಿಸ್ತೀರ್ಣ೫ ಅಡಿ ಹ್ಯಾಗ್ರಿ ಮಲಗಿಕೊಳ್ಳುತ್ತಿರೆಂದೆ. ಕಾಲು ಮಡಚಿಕೊಂಡು ಮಲಗಿಕೊಳ್ಳುತ್ತೇವೆ ಎಂದು ನಗುನಗುತ್ತಾ ಹೇಳಿದರು. ನೀವು ಒಳಗೆ ಬನ್ನಿಯಮ್ಮ ಎಂದು ಹೇಳಿದರು ಪಾಪ ಅವರು ಅದರಲ್ಲೆ ಎಷ್ಟು ಸಂತೋಷವಾಗಿದ್ದಾರೆ ಎಂದು ಅನಿಸಿತು. ಜಾನಕಮ್ಮ ಪ್ರತಿ ದಿನ ೪ ಕಿ.ಮಿ. ನಡೆದುಕೊಂಡು ಖಾದಿ ಕೇಂದ್ರಕ್ಕೆ ಬರುತ್ತಾರೆ. ಮಧ್ಯಾಹ್ನದ ಊಟಕ್ಕೆಂದು ಟಿಪಿನ್ ಬಾಕ್ಸಿನಲ್ಲಿ ಸಣ್ಣದೊಂದು ಮುದ್ದೆ ತರುತ್ತಾರೆ ಜೊತೆಗೆ ನೆಂಚಿಕೊಳ್ಳಲು ಏನಾದರೂ ಸರಿಯೆ ಕೊನೆಗೆ ಉಪ್ಪಿನಪುಡಿಯಾದರೂ ಸರಿ ಇವರ ಸರಾಸರಿ ಆದಾಯ ೨೦ ರಿಂದ ೨೫ ರೂಪಾಯಿ. ದಿನದ ದುಡಿಮೆಯ ಮೇಲೆ ಅಂದರೆ ಉತ್ಪಾದನೆಯ ಮೇಲೆ ಕೂಲಿ ಸಿಗುತ್ತದೆ.

ವಿಜಯ ೪೦ ವರ್ಷ. ಅವಿವಾಹಿತೆ, ಕಿವಿ ಕೇಳುವುದಿಲ್ಲ, ಮಾತುಬರುವುದಿಲ್ಲ, ತಾಯಿವಿಧವೆ ಇವರನ್ನು ಇವಳೆ ಪೋಷಿಸಬೇಕು ಬಹಳ ಚುರುಕುಸ್ವಭಾವದವಳು ಹೇಳಿದ್ದನ್ನು ಸನ್ನೆಯಲ್ಲಿಯೇ ಸೂಕ್ಷ್ಮವಾಗಿ ಗ್ರಹಿಸಿಬಿಡುತ್ತಾಳೆ. ನೇಯ್ಗೆ ಕೆಲಸದಲ್ಲಿ ಬಹಳ ಆಸಕ್ತಿ. ಅವಳಿಗೆ ಪದೇ ಪದೇ ಹೊಟ್ಟೆ ನೋವು ಬರಲು ಶುರುವಾಯಿತು, ಹಳ್ಳಿಯವರು ಮೂಢನಂಬಿಕೆಯಿಂದ ಯಾರೋ ಮಾಟಮಾಡಿಸಿದ್ದಾರೆಂದು ತೀರ್ಮಾನಿಸಿದ್ದರು. ನಂತರ ದೆವ್ವ ಹಿಡಿದಿದೆ ಎಂದು ಅನೇಕ ದೇವರುಗಳಿಗೆ ಹೋಗಿ ಬಂದರು. ಕೊನೆಗೆ ಇವಳು ಸಾಯಬಹುದೆಂದು ಎಲ್ಲರೂ ತೀರ್ಮಾನಿಸಿದರು ಕೊನೆಗೆ ನಾನು ಒಮ್ಮೆ ವೈದ್ಯರಿಗೆ ತೋರಿಸಿಬರೋಣವೆಂದು ಒತ್ತಾಯಿಸಿ ಮೈಸೂರಿನ ಕಾಮಾಕ್ಷಿ ಆಸ್ಪತ್ರೆಗೆ ಕರೆದುಕೊಂಡು ಹೋದೆ. ವೈದ್ಯರು ಇಂದೆ ಅಡ್ಮಿಟ್‌ಆಗಬೇಕು ನಾಳೆ ಬೆಳಿಗ್ಗೆ ಅಪೆಂಡಿಸೈಟಿಸ್ ಆಪರೇಷನ್ ಆಗಬೇಕಿದೆ ಎಂದರು. ಮಾರನೆ ದಿನ ಆಪರೇಷನ್ ಆಯಿತು ಆಸ್ಪತ್ರೆಯಲ್ಲಿ ಅವಳ ಜೊತೆಯಲ್ಲಿ ಅವಳ ತಾಯಿ ಇದ್ದರು. ಆಸ್ಪತ್ರೆಯ ಅವಳ ಸ್ವಲ್ಪಖರ್ಚನ್ನು ನಾವು ಟ್ರಸ್ಟಿನಿಂಧ ಕೊಟ್ಟೆವು. ಈಗ ವಿಜಯ ಆರಾಮವಾಗಿದ್ದಾಳೆ ಪ್ರತಿ ದಿನ ೨ ಕಿ.ಮಿ.ನಡೆದುಕೊಂಡು ಬರುತ್ತಾಳೆ ಇವಳ ಸರಾಸರಿ ಆದಾಯ ೨೫ ರಿಂದ ೩೦ ರೂ, ಇವರೆಲ್ಲರ ಜೊತೆಗೆ ಇರುವ ಸಂಬಂಧ ನನ್ನನ್ನು ಮತ್ತೆ ಖಾದಿ ಕೇಂದ್ರಕ್ಕೆ ಬರುವಂತೆ ಮಾಡಿತು. ಅವರ ನೇಯ್ಗೆಯ ಶಬ್ದ ನನಗೆ ಮಧುರ ಸಂಗೀತಕ್ಕಿಂತಲೂ ಹೆಚ್ಚು ಮಧುರವೆನಿಸುತ್ತದೆ.

***

ವೈಚಾರಿಕ ಕ್ರಾಂತಿಯ ಅಗತ್ಯ

–ಎಚ್.ಎಸ್.ದೊರೆಸ್ವಾಮಿ

ಸ್ವಾತಂತ್ರ್ಯ ಬಂದು ೫೮ ವರ್ಷವಾಯಿತು. ಸ್ವಾತಂತ್ರ್ಯದ ಫಲ ಎಲ್ಲರಿಗೂದೊರೆತಿಲ್ಲ. ಬಡತನ, ನೀರುದ್ಯೋಗದ ಸಮಸ್ಯೆ ಉಲ್ಬಣಗೊಂಡಿದೆ. ಎಲ್ಲೆಲ್ಲೂ ಭ್ರಷ್ಟಾಚಾರ ಹರಡಿದೆ. ಹಿಂಸೆ ಸಮಾಜದಲ್ಲಿ ಮೇರೆ ಮೀರಿ ಬೆಳೆದಿದೆ. ಬಡತನದ ಸೀಮಾ ರೇಖೆಯ ತಳಗಿನವರು ಸ್ವಾತಂತ್ರ್ಯ ಬಂದ ಮೇಲೆ ಸೃಷ್ಟಿಯಾಗಿದ್ದಾರೆ.

ಮೂಲಭೂತ ಸಮಸ್ಯೆಗಳಾದ ದುರ್ವ್ಯಸನಗಳು, ಬಡತನ, ಆರ್ಥಿಕ ಅಸಮಾನತೆ, ಮೇಲುಕೀಳು ಭಾವನೆ, ರಾಜಕೀಯ ಭ್ರಷ್ಟಾಚಾರ, ಚಾರಿತ್ರ್ಯದ ಬಿಕ್ಕಟ್ಟು, ಜಾತೀಯತೆ ಮತಾಂಧತೆ, ಬಾಲಕಾರ್ಮಿಕರ ಸಮಸ್ಯೆ, ಸ್ತ್ರೀಸ್ವಾತಂತ್ರ್ಯ ಮುಂತಾದ ಪಿಡುಗುಗಳೆಲ್ಲ ಹಿಂದಿನಂತೆಯೇ ಉಳಿದುಕೊಂಡಿವೆ.

ನಾವು ಸಾಧನೆಮಾಡಿಲ್ಲ ಅಂತಲ್ಲ. ಚಂದ್ರಗ್ರಹಕ್ಕೆ ಹಾರಿದ್ದೇವೆ. ಸಮುದ್ರದೊಳಗಿರುವ ಮುತ್ತು ರತ್ನ ತೆಗೆದಿದ್ದೇವೆ. ಪೆಟ್ರೋಲ್ ಹೊರಹಾಕಿದ್ದೇವೆ. ಶ್ರೀಮಂತರನ್ನೂ ಮತ್ತಷ್ಟು ಶ್ರೀಮಂತರನ್ನಾಗಿ ಮಾಡಿದ್ದೇವೆ. ಐಟಿ.ಬಿಟಿಯಲ್ಲಿ ಮಹಾಸಾಧನೆ ಮಾಡಿದ್ದೇವೆ. ಆರ್ಥಿಕ ಅಸಮಾನತೆಯನ್ನು ಬೆಳೆಸುವುದರಲ್ಲಿ ಐಟಿ.ಬಿಟಿ ಯವರ ಸಾಧನೆ ಗಣನೀಯ. ಮನುಷ್ಯನನ್ನು ಯಂತ್ರವನ್ನಾಗಿ ಬಳಸುತ್ತಿರುವ ಸಾಧನೆಯೂ ಐಟಿ.ಬಿಟಿಯವರದೇ. ಲಾಭದಾಯಕ ಸರ್ಕಾರಿ ಉದ್ಯಮಗಳನ್ನೂ ಮುಚ್ಚಿಹಾಕಿ, ಕಾರ್ಮಿಕರನ್ನೂ ಬೀದಿಪಾಲು ಮಾಡುವುದರಲ್ಲೂ ಸರ್ಕಾರದ ಸಾಧನೆಇದೆ.

ಒಟ್ಟಿನಲ್ಲಿ ನಮ್ಮ ಸರ್ಕಾರ ಅಪ್ಪಹಾಕಿದ ಆಲದಮರಕ್ಕೆ ನೇಣುಹಾಕಿಕೊಳ್ಳುವ ಕಂದಾಚಾರದ ಪದ್ಧತಿಗೇ ಅಂಟಿಕೊಂಡಿದೆ. ಅಲ್ಲೊಂದು ಇಲ್ಲೊಂದು ತ್ಯಾಪೆಕೆಲಸವಮಾಡಿ ಬಹಳ ಸಾಧನೆಮಾಡಿರುವುದಾಗಿ ಜಾಹೀರಾತು ಮಾಡಿಕೊಳ್ಳುತ್ತದೆ.

ಸ್ವತಂತ್ರ ಭಾರತದಲ್ಲಿ ಹೊಸ ಮೌಲ್ಯಗಳು ಹೊಸ ಆಲೋಚನೆಗಳು ಪ್ರಚಾರಕ್ಕೆ ಬರಬೇಕಾಗಿತ್ತು. ಮನುಷ್ಯನನ್ನು ಕೇಂದ್ರವಾಗಿಟ್ಟುಕೊಂಡು ಯೋಜನೆಗಳನ್ನು ಹಾಕಿಕೊಳ್ಳಬೇಕಾಗಿತ್ತು, ಅಭಿವೃದ್ಧಿ ಕೆಲಸಗಳನ್ನೂ ಮಾಡಬೇಕಾಗಿತ್ತು. ಹೊಸಸಮಾಜ ಒಂದನ್ನು ಸೃಷ್ಟಿಸಬೇಕಾಗಿತ್ತು. ಹೊಸಮೌಲ್ಯಗಳನ್ನು ಜಾರಿಗೆ ಕೊಡಬೇಕೆಂದಾದರೆ, ಕ್ರಾಂತಿಗೆ ದೇಶವನ್ನು ಅಣಿಮಾಡಬೇಕಾಗಿತ್ತು. ಕ್ರಾಂತಿ ಎಂದರೆ ಮೂಲಭೂತ ಬದಲಾವಣೆಗಳನ್ನು ಸಮಾಜದಲ್ಲಿ ತರುವುದು. ಮನುಷ್ಯ ಮನುಷ್ಯರ ಸಂಬಂಧ ಬದಲಾಯಿಸುವುದು. ಎಲ್ಲಬಗೆಯ ಭೇದಗಳನ್ನೂ ಅಂದರೆ ಸ್ಪ್ರಶ್ಯ, ಅಸ್ಪ್ರಶ್ಯ,

ಮೇಲುಕೀಳು, ಆ ಜಾತಿ ಈ ಜಾತಿ, ಆ ಮತ ಈ ಮತ, ಶೋಷಕ, ಶೋಷಿತ, ಉಳ್ಳವ,-ಬಡವ, ವಿದ್ಯಾವಂತ, ನಿರಕ್ಷರಕುಕ್ಷಿ ಮುಂತಾದ ಎಲ್ಲ ಭೇದಗಳನ್ನೂ ತೆಗೆದುಹಾಕುವುದು.

ಈ ಕೆಲಸ ಆಗಬೇಕಾದರೆ ಅದು ಜನರ ಮನದಲ್ಲಿ ಕ್ರಾಂತಿಯ ಬೀಜ ಬಿತ್ತುವುದರಿಂದ ಆರಂಭವಾಗಬೇಕು. ವಿಚಾರ ಕ್ರಾಂತಿ ಪ್ರತಿಯೊಬ್ಬ ಭಾರತೀಯನ ತಲೆಯಲ್ಲಿ ಆಗಬೇಕು. ಇದರ ಮುಂದಿನ ಹೆಜ್ಜೆ-ಸಂಘಟನೆ, ವ್ಯಾಪಕ ಪ್ರಚಾರ. ಅಗತ್ಯಬಿದ್ದರೆ ಈ ಕ್ರಾಂತಿ ತರುವುದಕ್ಕಾಗಿ ಸಮರ ಸಾರಬೇಕು. ಈಗ ಸರ್ಕಾರದ ಮುಂದೆ ಈ ಬಗೆಯ ಚಿಂತನೆಯೇ ಇಲ್ಲ. ನಮ್ಮ ಶಾಸಕರೆಲ್ಲ ಜಡತಾವಾದಿಗಳು ಅವರಿಗೆ ಮೊದಲು ಈ ಕ್ರಾಂತಿಯ ಸ್ವರೂಪವನ್ನು ತಿಳಿಸಿಹೇಳಬೇಕು.

***

ಪುಸ್ತಕ ವಿಚಾರ

ಪುಸ್ತಕದ ಹೆಸರು : ಮರಳಿ ಬಂದ ಮೂರು ಕತೆಗಳು,
ಲೇಕಖರು : ಕೆ.ಪಿ. ಸುರೇಶ್
ಪ್ರಕಾಶಕರು : ಅಕ್ಷರ-ಕೃಷಿ ಪ್ರಕಾಶನ ಕುಕ್ಕಜಡ್ಕ-೫೭೪೨೧೨ ಸುಳ್ಯ ದ.ಕ.
ಪುಟಗಳು : ೬೩,
ಬೆಲೆ : ೮೦-೦೦
ಪ್ರಕಟಣೆಯ ವರ್ಷ : ಡಿಸೆಂಬರ್ ೨೦೦೫.

ಇಂದು ಯಾವುದೇ ಬಗೆಯ ಸಮಸ್ಯೆಯ ಪರಿಹಾರಕ್ಕೆ ಹಿಂಸೆಯನ್ನು ಅವಲಂಬಿಸುವ ಪ್ರವೃತ್ತಿ ಜನಮಾನಸದಲ್ಲಿ, ಸರ್ಕಾರದಲ್ಲಿ ಮತ್ತು ಸಾವ್ರತ್ರಿಕವಾಗಿ ಬೆಳೆಯುತ್ತಿದೆ. ಇದರಿಂದ ಭಿನ್ನವಾದ ಮನಃ ಪರಿವರ್ತನೆಯ ಅಹಿಂಸಾತ್ಮಕ ವಿಧಾನಗಳನ್ನು ಹುಡುಕುವ ತುರ್ತು ಅಗತ್ಯ ಇಂದು ಇದೆ. ಅಂತಹ ವಿಧಾನವನ್ನು ನಮ್ಮದೆ ನಾಡಿನ ಜಾನಪದ ರ ಸೃಷ್ಟಿಯಾದ ಪುಣ್ಯಕೋಟಿಯ ಕಥೆ, ಸಂಸ್ಕೃತ ನಾಟಕ ನಾಗಾನಂದದ ಜಿಮೂತವಾಹನನ ತ್ಯಾಗದ ಕಥೆ; ಗಾಂಧೀಜಿಯವರ ನೌಖಾಲಿ ಶಾಂತಿ ಯಾತ್ರೆಯ ಸಂದರ್ಭದಲ್ಲಿ ಅವರ ಅನುಯಾಯಿ ಬೀಬಿ ಅಮ್ಟುಸ್ ಸಲಾಂಳ ಚಾರಿತ್ರಿಕ ಘಟನೆ ಇವುಗಳನ್ನು ಕಥನ ರೂಪದಲ್ಲಿ ಲೇಖಕರು ಈ ಪುಸ್ತಕದಲ್ಲಿ ರೂಪಿಸಿದ್ದಾರೆ.

ಈ ಪುಸ್ತಕ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪರ್ಯಾಯ ಪಠ್ಯವಾಗಬಲ್ಲದು. ಈ ಪುಸ್ತಕದಲ್ಲಿ ಮಕ್ಕಳ ಮನಸ್ಸನ್ನು ಆಕರ್ಷಿಸುವ ಚಿತ್ರಗಳಿವೆ. ಪುಸ್ತಕದ ರಕ್ಷಾಪುಟವನ್ನು ಇಕ್ಬಾಲ್ ಅಹಮದ್ ಅವರು ಆಕರ್ಷಕವಾಗಿ ತಯಾರಿಸಿದ್ದಾರೆ.

***

ದುರ್ಬಲರ ಸಬಲೀಕರಣ-ಅಭಿವೃದ್ಧಿಗೆ ಅಗತ್ಯ

-ನೀಲತ್ತಹಳ್ಳಿ ಕಸ್ತೂರಿ.

'ಸಬಲೀಕರಣ' ಇದು ಈಗ ಮೇಲಿಂದ ಮೇಲೆ ಕಿವಿಗೆ ಬೀಳುವ ಶಬ್ದ. ಬಲ ಕಡಿಮೆ ಇರುವವರು ಇತರರ ಜೊತೆ ಸರಿಸಮಾನವಾಗಿ ನಿಲ್ಲುವುದಕ್ಕೆ ಸಾಧ್ಯವಾಗುವಂತೆ ಬಲವನ್ನು ಒದಗಿಸುವುದು ಎಂಬುದಕ್ಕೆ ಈ ಶಬ್ದ ಹುಟ್ಟಿಕೊಂಡಿದೆ. ಬಲವರ್ಧನೆಯಾಗಬೇಕಾದರೆ, ವ್ಯಕ್ತಿಯನ್ನು ಮೀರಿದ ಸಮಾಜಸುಧಾರಣೆ ಅಗತ್ಯವಾಗುತ್ತದೆ. ಒಬ್ಬ ವ್ಯಕ್ತಿ ಸುತ್ತಲ ಪರಿಸರದ ಪರಿಣಾಮದಿಂದಾಗಿ, ಹಿಂದುಳಿದು ದುರ್ಬಲನಾಗಿರಬಹುದು. ಸಂಸ್ಕೃತಿಯ ಪ್ರಥಮ ಅಂಶ ಸಂಯಮ.ಸಂಸ್ಕೃತಿ ಇಲ್ಲವೆಂದಾದಮೇಲೆ ಸಂಯಮ ಎಲ್ಲಿಂದ ಬಂದೀತು? ಹಾಗಾಗಿ ಅಸ್ಪ್ರಶ್ಯರೆಂದು ಕರೆಯಲ್ಪಟ್ಟ ಜನ ಬರುಬರುತ್ತ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಶೋಷಣೆಗೆ ತುತ್ತಾದರು. ತಮ್ಮ ವ್ಯಕ್ತಿತ್ವವನ್ನೆ ಕಳೆದುಕೊಳ್ಳುವ ಸ್ಥಿತಿಗೆ ಬಂದರು.

ಬುದ್ಧ, ಬಸವರಂಥ ಪ್ರಾಚೀನರು ಆಗಲೇ ಈ ಪಿಡುಗಿನ ವಿರುದ್ಧ ದನಿಯೆತ್ತಿದರು. ಸಮಾಜದ ಈ ಓರೆಯನ್ನು ತಿದ್ದಲು ಯತ್ನಿಸಿದರು. ನಮ್ಮ ಕಾಲದಲ್ಲಿ ಗಾಂಧೀಜಿ ಪ್ರಮುಖವಾಗಿ, ಹಾಗೂ ಇತರ ಅನೇಕರೂ ಜೊತೆಗೂಡಿ ಈ ಕಳಂಕ ನಿವಾರಣೆಗೆ ಶ್ರಮಿಸಿದರು. ಉದಾಹರಣೆಗೆ ಮಹಾತ್ಮಫುಲೆ, ಸ್ವಾಮಿನಾರಾಯಣಗುರು ಮುಂತಾಗಿ. ಗಾಂಧೀಜಿಯಂತೂ ಅಸ್ಪ್ರಶ್ಯತೆ ಹಿಂದೂ ಸಮಾಜದ ವ್ರಣ ಮತ್ತು ಹೀನಾಯಕರ ಕಳಂಕ ಎಂದು ಖಂಡಿಸಿದರು. ಇದು ಮೇಲುವರ್ಗಕ್ಕೆ ಅಂಟಿದ ಶಾಪ, ಆದ್ದರಿಂದ ಅವರೇ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು ಎಂದು ಗಾಂಧೀಜಿ ಆ ವರ್ಗದ ಮನಃಪರಿವರ್ತತೆಗೆ ಒತ್ತುಕೊಟ್ಟರು. ಮೇಲ್ವರ್ಗದಲ್ಲಿ ಈ ಕುಪದ್ಧತಿಯ ಬಗ್ಗೆ ಅಪರಾಧಪ್ರಜ್ಞೆಯನ್ನು ಕೊನರಿಸಿ ಆ ಜನ ತಾವಾಗಿಯೆ ಈ ಕಳಂಕ ನಿವಾರಣೆಗೆ ಮುಂದಾಗುವಂತೆ ಸಮಾಜವನ್ನು ಸಿದ್ಧಗೊಳಿಸಲು ಯತ್ನಿಸಿದರು.

ಅತ್ತ ಅಂಬೇಡ್ಕರ್ ಸಾಹೇಬರ್ರು ಸ್ವತಃ ಈ ಕಳಂಕದ ಯಾತನೆಯನ್ನು ಅನುಭವಿಸಿ, ಇಂಥದು ಯಾರಿಗೂ ಆಗಬಾರದೆಂದು ಪಣತೊಟ್ಟು ಆ ದಲಿತವರ್ಗದವರನ್ನು ಎಚ್ಚರಿಸಲು ಹೆಣಗಿದರು.

ಹೀಗೆ ಒಂದು ಕಡೆಯಿಂದ ಶೋಷಕರಾದ ಮೇಲುವರ್ಗದವರ ಮನಃಪರಿವರ್ತನೆ, ಇನ್ನೊಂದೆಡೆ ಶೋಷಿತರಾದ ಕೆಳವರ್ಗದವರ ಜಾಗೃತಿ ಹೀಗೆ ದ್ವಿಮುಖ ಸುಧಾರಣಾ ಚಳುವಳಿ ಕಳೆದ ಶತಮಾನದಲ್ಲಿ ಜರುಗಿದ್ದು ಗಮನಾರ್ಹ. ಆಗ ನಡೆದಿದ್ದ ಸ್ವಾತಂತ್ರ್ಯ ಹೋರಾಟದ ಜೊತೆಜೊತೆಗೇ ಈ ಅಸ್ಪ್ರಶ್ಯತಾ ನಿವಾರಣ ಚಳುವಳಿ ಸೇರಿಕೊಂಡು ಬೆಳೆಯಿತು. ಇದೆಲ್ಲದರ ಪರಿಣಾಮವಾಗಿ ಸ್ವತಂತ್ರಭಾರತದ

ಸಂವಿಧಾನವು ಅಸ್ಪ್ರಶ್ಯತೆಯ ಕಳಂಕವನ್ನು ತೊಡೆದುಹಾಕಲು ಅನುವುಮಾಡಿಕೊಟ್ಟಿತು. ಅಸ್ಪ್ರಶ್ಯತೆಯನ್ನು ಅಪರಾಧವೆಂದು ಸಾರಿ, ಆ ಕುಪದ್ಧತಿಯ ಸೊಂಟವನ್ನೇ ಮುರಿಯಿತು. ಅಸ್ಪ್ರಶ್ಯತೆ ಪೂರ್ಣವಾಗಿ ಇಂದೂ ಪರಿಹಾರವಾಗಿಲ್ಲ ನಿಜ. ಸಾವಿರಾರು ವರ್ಷಗಳಿಂದ ಜನತೆಯಲ್ಲಿ ಬೇರುಬಿಟ್ಟ ವ್ಯವಸ್ಥೆ, ಮನಸ್ಸಿನಲ್ಲಿ ಕೂತ ವಿಚಾರ, ಪೂರಾ ನಿರ್ಮೂಲವಾಗಲು ಸಾಕಷ್ಟು ಸಮಯಬೇಕು. ಅಂತೂ ದಿಕ್ಕು ಬದಲು ಮಾಡಿರುವುದಂತೂ ಆಗಿದೆ. ಸಾಮಾಜಿಕವಾಗಿ ಸಮಾನತೆಯ ಹಾದಿಯಲ್ಲಿ ಹೊರಟಾಗಿದೆ. ಇಂದಲ್ಲ ನಾಳೆ ಗುರಿ ಮುಟ್ಟುವುದು ಖಂಡಿತ.

ಸಂವಿಧಾನವೇನೊ ಸಮಾನತೆಯನ್ನು ಸಾರಿತು. ಆದರೆ ಅದು ಫಲಿಸಿದೆಯೆ? ತೀರ ಕಡು ಬಡವನೂ, ಅತ್ಯುನ್ನತ ಸ್ಥಾನಕ್ಕೆ ಆಶಿಸಬಹುದೇ? "ಕಟ್ಟಕಡೆಯ ಕಡು ಬಡವನೂ ಪ್ರಭುತ್ವ, ಅನ್ಯಾಯ ಮಾಡಿದರೆ ಪ್ರತಿಭಟನೆಯ ದನಿ ಎತ್ತುವ ಶಕ್ತಿ ಪಡೆದಾಗಲೇ ನಿಜವಾದ ಪ್ರಜಾತಂತ್ರ" ಎಂದು ಗಾಂಧೀಜಿ ಹೇಳಿದ್ದರು. ಕಟ್ಟಕಡೆಯವನಿಗೆ ಶಕ್ತಿ ಬಂತೇ, ಬಲ ಬಂತೇ?– ಇದೇ ನಿಕಷ.

ಈ ಸ್ಥಿತಿ, ಈ ಆದರ್ಶ. ಇನ್ನೂ ಬಹು ದೂರ. ಅಂಥ ಸ್ಥಿತೆಗೆ ಮುಟ್ಟಲು ನಾವಿನ್ನೂ ಬಹುದೂರ ನಡೆಯಬೇಕಾಗಿದೆ. ಆದರೆ ಇದು ಅಸಾಧ್ಯವೇನಲ್ಲ, ನಮ್ಮ ಸಂವಿಧಾನದಲ್ಲಿ ಅದಕ್ಕೆ ಅವಕಾಶವಿದೆ.

ಕಡು ಬಡವನಿಗೂ ದೀನ ದಲಿತನಿಗೂ ಅವಕಾಶ ದೊರೆಯುವುದು, ಇತರರೊಡನೆ ಸ್ಪರ್ಧಿಸಿ ಗೆದ್ದು ತನ್ನ ಸ್ವಸಾಮರ್ಥ್ಯದಿಂದ ತಲೆಯೆತ್ತಿಕೊಂಡು ಮಹತ್ಸಾಧನೆ ಮಾಡುವುದು, ಉನ್ನತಸ್ಥಾನ ಪಡೆದುಕೊಳ್ಳುವುದು, ರಾಷ್ಟ್ರದ ಮುನ್ನಡೆಯಲ್ಲಿ ಧೀರೋಚಿತ ಸ್ಥಾನ ಪಡೆಯುವುದು, ರಾಷ್ಟ್ರದ ಪ್ರಗತಿಗೆ ತನ್ನ ಕೊಡಗೆಯನ್ನು ಗಣನೀಯವಾಗಿ ಕೊಡುವುದು ಇದೆಲ್ಲ ಹಗಲುಗನಸೇ?

ಇಂದಿನ ಸಾಮಾನ್ಯ ಪರಿಸ್ಥಿತಿ ನೋಡಿದರೆ "ಹೌದು" ಎಂದೇ ಎನಿಸಬಹುದು. ಆದರೆ ಕತ್ತಲು ಎಷ್ಟೇ ವ್ಯಾಪಿಸಿರಲಿ, ಅಲ್ಲೊಂದು ಇಲ್ಲೊಂದು ಮಿಡಿಹಣತೆ ಮಿಣಮಿಣ ಬೆಳಗುವುದನ್ನು ನೋಡಬಹುದು. ವೈಯಕ್ತಿಕವಾದ, ಸಾಮಾಜಿಕವಾದ ಅಡೆತಡೆ ಏನೇ ಇರಲಿ, ಯಾವುದಕ್ಕೂ ಹಿಂಜರಿಯದೆ, ಎಲ್ಲವನ್ನೂ ದಾಟಿ ಮಹೋದ್ದೇಶವನ್ನು ಬಿಡದೆ ಸಾಧಿಸುವ ಜನ ಇದ್ದಾರೆ. ಅವರು ಸಂವಿಧಾನದ ಈ ಆಶಯವನ್ನು ಸಾರ್ಥಕಗೊಳಿಸುತ್ತಾರೆ. ಇದಕ್ಕೆ ಇತ್ತೀಚೆಗೆ ತೀರಿಕೊಂಡ ಹಿಂದಿನ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಅವರೇ ಸಾಕ್ಷಿ.

ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಶ್ರೀ ಸಾಮಾನ್ಯನೇ ಕೇಂದ್ರ ಬಿಂದು, ಹೋರಾಟದ ಜೋಡಿಯಾಗಿ ನಡೆಯಿತು ಸಬಲೀಕರಣ ಚಳುವಳಿ, ಮಹಾನ್ ಬ್ರಿಟೀಷ್ ಪ್ರಭುತ್ವವನ್ನು ಕೊನೆಗಾಣಿಸಲು ಗಾಂಧೀಜಿ ಚಳುವಳಿಗೆ ಹೂಡಿದ್ದು ಅಂಥ ಸಾಮಾನ್ಯರನ್ನೇ, ದಿನ ದಲಿತರನ್ನೇ. ಅವಕಾಶವಂಚಿತರ ಉದ್ಧಾರವೇ ನಿಜವಾದ ಸಬಲೀಕರಣ. ಮಹಿಳೆಯರ, ಅಲ್ಪಸಂಖ್ಯಾತರ ಬಗೆಗೆ ವಹಿಸುವ

ಕಾಳಜಿಯೆ ಸಬಲೀಕರಣ. ಮಹಾತ್ಮಗಾಂಧೀ, ಡಾ॥ ಅಂಬೇಡ್ಕರ್ ಅವರುಗಳ ಸಾಧನೆಯೆ ಅದು. ಅವಕಾಶ ವಂಚಿತರ ಹಾಗೂ ಶೋಷಿತರ ಅಭಿವೃದ್ಧಿ. ಜನತೆಯಲ್ಲಿದ್ದ ಭಯವನ್ನು ಹೋಗಲಾಡಿಸಿ, ಅವರಲ್ಲಿ ನೈತಿಕ ಬಲವನ್ನು, ಜಾಗೃತಿಯನ್ನು ತುಂಬಿ ಗಾಂಧೀಜಿ ಅವರನ್ನೇ ಸ್ವಾತಂತ್ರ್ಯ ಸಂಪಾದನೆಯ ಸಾಧನಗಳನ್ನಾಗಿ ಮಾಡಿಕೊಂಡರು. ಆ ನಿರ್ಭಯತೆ ಆ ನೈತಿಕ ಮೌಲ್ಯಗಳು ಇಂದಿಗೂ ಅತ್ಯವಶ್ಯ. ಭಾತರ ಕೇವಲ ಬಲಿಷ್ಠವಾಗಿ ಬೆಳೆದರು ಸಾಲದು. ಅದರ ನೈತಿಕ ಸತ್ವ ಬೆಳೆಯಬೇಕು. ಆ ನೈತಿಕ ಸತ್ವ ಬೆಳೆಯಲು ಸಮಾಜದಲ್ಲಿ ಅಸಮಾನತೆ, ಶೋಷಣೆ, ಬವಣೆ ತಪ್ಪಬೇಕು. ಸಾಮಾಜಿಕ ಸಮತೆ ಮತ್ತು ಆರ್ಥಿಕ ಸಮತೆ ಇಲ್ಲದ ರಾಜಕೀಯ ಸಮಾನತೆ ನಮ್ಮ ಪ್ರಜಾತಂತ್ರ ವ್ಯವಸ್ಥೆಗೇ ಹಾನಿಕರ ಎಂದಿದ್ದರು ಡಾ॥ ಅಂಬೇಡ್ಕರ್. ದಲಿತರ ಸಬಲೀಕರಣ ಆಕಾಂಕ್ಷೆಯಲ್ಲಿ, ಸಾಧನೆಯಲ್ಲಿ, ಇಡೀ ಭಾರತದ ಸಬಲೀಕರಣವೇ ಸೇರಿಕೊಂಡಿದೆ. ಬಲಿಷ್ಠ ಭಾರತ ಎಂದರೆ ಸಬಲಗೊಂಡ ಜನತೆ. ಅದಕ್ಕೆ ಸರ್ವೋದಯವೇ ದಾರಿ. ಅದರ ಸಲುವಾಗಿಯೇ ಗಾಂಧೀಜಿ ತಮ್ಮ ಬಾಳನ್ನು ಅರ್ಪಿಸಿದರು. ಮಾರುಕಟ್ಟೆಯ ಅಭಿವೃದ್ಧಿ, ಜಾಗತೀಕರಣ, ಉದಾರಿಕರಣಗಳ ಭರಾಟೆಗಳ ನಡುವೆ, ತಮ್ಮ ಇರುವಿಕೆಗೇ ಹೆಣಗುತ್ತಿರುವ ಸಾಮಾನ್ಯಜನರ ಮೂಲಭೂತ ಅಸ್ತಿತ್ವದ ಬಗ್ಗೆ ಕಾಳಜಿ ಅತ್ಯವಶ್ಯ. ಬಡತನ, ಹಿಂದುಳಿದ ಜನ ಬಲಪಡೆದುಕೊಂಡಾಗ ಭಾರತವೇ ಬಲಿಷ್ಠವಾದೀತು. ಇದೇ ಸ್ವಾತಂತ್ರ್ಯಹೋರಾಟಗಾರರ ಆಶಯವಾಗಿತ್ತು, ಸಂದೇಶವಾಗಿತ್ತು. ಭಾರತದ ಪುರೋಭಿವೃದ್ಧಿಯಲ್ಲಿ ಆಸಕ್ತರಾದವರು ಈ ಮೂಲಭೂತ ವಿಷಯವನ್ನು ಗಮನಿಸಲೇಬೇಕಾಗಿದೆ.

ಇದು, ವಿಚಾರವಂತರ ಮಾತು, ಮಾಗಿದ ಮನಸ್ಸಿನ ಮಾತು. ನಾಗಾಲೋಟದಲ್ಲಿ ಮುನ್ನಡೆಯುತ್ತಿರುವ ನಮ್ಮ ನಾಡು ಅಗತ್ಯ ಗಮನಿಸಬೇಕಾದ ವಿಚಾರ.

***

ಅರುಂಧತಿರಾಯ್ ಮತ್ತು ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಸುಪ್ರಸಿದ್ಧ ಇಂಗ್ಲಿಷ್ ಭಾಷಾ ಸಾಹಿತಿ ಮತ್ತು ಪರಿಸರಪ್ರಿಯೆ ಅರುಂಧತಿರಾಯ್ ಈ ವರ್ಷದ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿಯನ್ನು ನಿರಾಕರಿಸಿದ್ದಾರೆ. ತಮ್ಮ ನಿರಾಕರಣೆಯ ಸಮರ್ಥನೆಗಾಗಿ ಅವರು ಕೊಟ್ಟ ಹೇಳಿಕೆ ಸಾಮಾಜಿಕ ಮಹತ್ವ ಪಡೆದಿದೆ. ಅವರ ಪ್ರಕಾರ ಭಾರತ ಸರ್ಕಾರ ಕೈಗಾರಿಕಾ ಕಾರ್ಮಿಕರ ವಿರುದ್ಧ ಅಮಾನುಷವಾಗಿ ನಡೆದುಕೊಳ್ಳುತ್ತಿದೆ. ಸೇನಾಶಕ್ತಿಯನ್ನು, ಹೊಸ ಆರ್ಥಿಕ ಉದಾರೀಕರಣ ನೀತಿಯನ್ನು ಅನುಸರಿಸುವಲ್ಲಿ ಬಹು ಹಿಂಸಾತ್ಮಕವಾಗಿ ಮತ್ತು ನಿರ್ದಯವಾಗಿ ಅಮೆರಿಕೆಯನ್ನೆ ಅನುಸರಿಸುತ್ತಿದೆ. ಆದ್ದರಿಂದ ತಾವು ಈ ಪ್ರಶಸ್ತಿಯನ್ನು ನಿರಾಕರಿಸುವುದಾಗಿ ರಾಯ್ ಹೇಳಿದ್ದಾರೆ.

***

ಅಹಿಂಸೆಯ ಆಧಾರದ ಮೇಲೆ ಮಾನವನ ಏಕತೆ

-ಸತ್ಯವ್ರತ.

ಕುರಾನ್ ಮತ್ತು ಕತ್ತಿ ಎರಡೂ ಜೊತೆಗೂಡಿಯೇ ಬಂದವು. ಶ್ರೀರಾಮನಲ್ಲಿ ಮರ್ಯಾದಾ ಪುರುಷೋತ್ತಮನ ಉದಾತ್ತ ವಿಚಾರಗಳು ಮತ್ತು ಅಷ್ಟೇ ಉದಾತ್ತ ಆಚರಣೆಗಳ ಜೊತೆಗೆ ಕೈಯಲ್ಲಿ ಕೋದಂಡ ಧನುರ್ಬಾಣಗಳು ಜೊತೆಗೂಡಿಯೇ ಇದ್ದವು. ಶ್ರೀಕೃಷ್ಣನಲ್ಲಿ ಮುರಳಿ ಮತ್ತು ಸುದರ್ಶನಚಕ್ರ ಜೊತೆಗೂಡಿ ಶೋಭಾಯಮಾನವಾಗಿದ್ದವು. ಪ್ರಾಯಶಃ ನಮ್ಮ ದೇವ-ದೇವತೆಗಳೆಲ್ಲರೂ ಶಸ್ತ್ರಧಾರಿಗಳು. ಯಾವುದಾದರೂ ಒಂದು ನಿರ್ಣಾಯಕ ಘಟ್ಟ ತಲುಪಿದಾಗ, ಕೊಟ್ಟ ಕೊನೆಯ ತೀರ್ಪು ತೆಗೆದುಕೊಳ್ಳ ಬೇಕಾದ ಗಳಿಗೆ ಸಮೀಪಿಸಿದಾಗ ಎಂದರೆ ಶಸ್ತ್ರ ಮತ್ತು ಉದಾತ್ತ ವಿಚಾರ ಅಥವಾ ಮುರಳಿ ಮತ್ತು ಸುದರ್ಶನ ಚಕ್ರಗಳೆರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗಿ ಬಂದಾಗ, ಎರಡರಲ್ಲಿ ಒಂದನ್ನು ಪ್ರಯೋಗಿಸಬೇಕಾಗಿ ಬಂದಾಗ ಶ್ರೀರಾಮ ಧನುರ್ಬಾಣಗಳನ್ನೂ, ಶ್ರೀಕೃಷ್ಣ ಸುದರ್ಶನಚಕ್ರವನ್ನೂ ಆರಿಸಿ, ಅದನ್ನೆ ಅಂತಿಮ ಅಸ್ತ್ರವನ್ನಾಗಿ ಪ್ರಯೋಗಿಸಿ ಎದುರಾಳಿಯನ್ನೋ, ಲೋಕ ಕಂಟಕಪ್ರಾಯರಾಕ್ಷಸರನ್ನೋ, ಸಂಹರಿಸಿದರು. ಧನುರ್ಬಾಣಗಳು, ಸುದರ್ಶನ ಚಕ್ರ ಇತ್ಯಾದಿಗಳ ಕಡೆಯೇವಾಲಿದರು. ಅವೇ ಅವರ ಅಂತಿಮ ಆಯ್ಕೆಯಾದವು. ಅವೇ ಅಂತಿಮ ದಂಡಾಧಿಕಾರಿಗಳಾದವು. ದಂಡನೆ-ಶಿಕ್ಷೆ ವಿಧಿಸುವ ಅಧಿಕಾರ, ಅದರ ಮೇಲೆ ಒತ್ತಬೇಕಾದ ಅಧಿಕಾರಿಕ ಮೊಹರು, ಕೊಟ್ಟ ಕೊನೆಯ ತೀರ್ಪುಗಾರ ಎಲ್ಲವೂ ಶಸ್ತ್ರವೇ, ಶಸ್ತ್ರದಕೈಗೇ, ಕೊನೆಗೆ ಶಸ್ತ್ರದ್ದೇ ಮೇಲುಗೈ. ಹಿಂಸೆ-ಅಹಿಂಸೆಗಳೆರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗಿ ಬಂದಾಗ ಹಿಂಸಾಮಾರ್ಗವನ್ನೇ ಆಯ್ದುಕೊಂಡಂತಾಯಿತು. ಅದಕ್ಕೇ ಗೆಲುವಾದಂತೆ ತೋರಿ ಬಂತು. ಹಿಂಸೆ ಮತ್ತು ಅಹಿಂಸಾಶಕ್ತಿಗಳೆರಡೂ ಜೊತೆಗಿದ್ದೂ ಸಹ ಅಂತಿಮಆಯ್ಕೆ ಹಿಂಸೆಯೇ ಎದುರಾದುದು ಮಾನವವಿಕಾಸದ ಒಂದು ಮಜಲು. ವಿಕಾಸ ಇಷ್ಟು ಆಯಿತು. ಇಲ್ಲಿಯವರೆಗೂ ಬಂದು ನಿಂತುಹೋಯಿತು. ಅದು ಅಹಿಂಸೆಯ ದಿಶೆ ಹಿಡಿಯಲಿಲ್ಲ, ಮುಂದೆ ಸಾಗಲಿಲ್ಲ ಎಂದರ್ಥ.

ಆದರೆ ಬುದ್ಧನೊಬ್ಬನೇ ಸತ್ತೆ ಮತ್ತು ಶಸ್ತ್ರಗಳರೆಡನ್ನೂ ತೊರೆದು, ಅವುಗಳ ಸಂಬಂಧವನ್ನಿಟ್ಟು ಕೊಳ್ಳದೆ ಪರಿಶುದ್ಧ ರೀತಿ-ನೀತಿಯನ್ನನ್ನುಸರಿಸಿ ಧರ್ಮ ಪ್ರಚಾರ-ಪ್ರಸಾರ ಮಾಡಿದ. ಅಶೋಕ ಬುದ್ಧನಮಾರ್ಗ ತುಳಿದ.

ಆದ್ದರಿಂದ ಅಹಿಂಸೆಯ ದಿಶೆಯಲ್ಲಿ ಮಾನವ ಹೆಚ್ಚು ದೃಢಹೆಜ್ಜೆ ಇಟ್ಟದ್ದು, ವಿಕಾಸ ಸಾಧಿಸಿದ್ದು ಈ ಹಂತದಿಂದಲೇ. ಈ ಅರ್ಥದಲ್ಲಿ ಮತ್ತು ಈ ನಿಟ್ಟಿನಲ್ಲಿ ವಿಚಾರ ಮಾಡಿದಾಗ ಶಾಕ್ಯಮುನಿ ಬುದ್ಧ ರಾಮ-ಕೃಷ್ಣರ ವಿಕಸಿತ ರೂಪ ಎನ್ನಬೇಕು. ಇಲ್ಲಿ ಅಹಿಂಸೆಯ ವಿಕಾಸವಾಯಿತು ಮತ್ತು ಮಾನವ ಜಾತಿ ಈ ದಿಶೆಯಲ್ಲಿ ಕಿಂಚಿತ್ ಪ್ರಗತಿಸಾಧಿಸಿತು. ಅಷ್ಟು ಮಟ್ಟಿಗೆ ಅಹಿಂಸೆಯ ವಿಸ್ತಾರವಾಯಿತು.

ಪ್ರೇಮವು ಅಹಿಂಸೆಯ ಭಾವ ರೂಪ, ವಿಧ್ಯಾತ್ಮಕ ಶಬ್ದ. ಜೀವನದಲ್ಲಿ ಅಹಿಂಸೆಯನ್ನು ಬಿಟ್ಟು ಸತ್ಯವನ್ನು ಆಚರಿಸುವುದು ಶಕ್ಯವಿಲ್ಲ ಎಂದರು ಗಾಂಧೀ. ಗಾಂಧೀಜಿ

ಸತ್ಯ-ಅಹಿಂಸೆಯ ಜೋಡಿಯನ್ನು ನಿರಂತರ ಜಪಿಸುತ್ತಿದ್ದುದಕ್ಕೆ ಇದೇ ಕಾರಣ. ಪ್ರೇಮದ ನಿಷೇಧಕ ಮತ್ತು ವಿಧಾಯಕ ರೂಪಗಳೆರಡೂ ಕೂಡಿ ಅದು ಪೂರ್ಣವಾಗುತ್ತದೆ. ಸಾರ್ವತ್ರಿಕ ಅಹಿಂಸೆಯು ಮಾನವೀಯ ಸಂಬಂಧಗಳಲ್ಲಿ ಪ್ರೇಮದ ರೂಪ ತಳೆದು ಒಂದುಗೂಡಿಸುವ ತತ್ವವಾಗಿ ಪ್ರಕಟವಾಗುತ್ತದೆ. ಹಾಗೆಯೇ ಪ್ರೇಮವು ತನ್ನ ನಿಷೇಧಾತ್ಮಕವಾದ ಅಹಿಂಸಕ ರೂಪತಳೆದು ಪಾರಸ್ಪರಿಕ ಸಂಬಂಧಗಳನ್ನು ಶುದ್ಧಗೊಳಿಸುತ್ತದೆ. ಹೀಗೆ ಒಂದು ಶುದ್ಧಗೊಳಿಸುವ, ಇನ್ನೊಂದುಸಿದ್ಧಗೊಳಿಸುವ ಮತ್ತು ಮತ್ತೊಂದು ಒಂದುಗೂಡಿಸುವ, ಇನ್ನೊಂದು ಪವಿತ್ರಗೊಳಿಸುವ ಕಾರ್ಯಮಾಡಿ ಒಟ್ಟು ಮಾನವಸಮುದಾಯವನ್ನು ಏಕರಸ ಸಮರಸದ ಘಟಕವನ್ನಾಗಿ ರೂಪಿಸುತ್ತವೆ. ಆದ್ದರಿಂದ ಪ್ರೇಮವು ಆಧಾರ ಭೂತ ಶಾಶ್ವತ ನೀತಿತತ್ವ ಅದು ಮಾನವ ಜಾತಿಗಷ್ಟೇ ಅಲ್ಲ, ಸಕಲ ಜೀವರಾಶಿಗೆ ಅನ್ವಯಿಸುವ ಶಾಶ್ವತ ನೀತಿ ತತ್ವ

ಸಮಾಜದಲ್ಲಿ ಹಿಂದುಳಿದವರು, ದೀನ-ದಲಿತರು, ಪೀಡಿತರು, ವಂಚಿತರು ಪತಿತರು ಇವರೆಲ್ಲರನ್ನು ಆತ್ಮೀಯರಂತೆ, ಅನನ್ಯರಂತೆ ಕಾಣುವುದರಲ್ಲೇ ಇಂದು ಪ್ರೇಮ ವ್ಯಕ್ತವಾಗಬಲ್ಲದು. ಇದೇ ಅಂತ್ಯೋದಯದ ಮೊದಲ ಮೆಟ್ಟಿಲು. ಇಲ್ಲಿಂದಲೇ ಸರ್ವೋದಯದ ಆರಂಭ. ಇದನ್ನು ಬೇಕಾದರೆ ಸರ್ವೋದಯಧರ್ಮ. ಅರ್ಥಾತ್ ಮಾನವ ಧರ್ಮ ಎನ್ನಬಹುದು.

ಇಡೀ ಮಾನವ ಜಾತಿಯೊಡನೆ, ಅಷ್ಟೇ ಏಕೆ, ಸಕಲ ಜೀವರಾಶಿಯೊಡನೆ ಅನನ್ಯತೆಯನ್ನೂ, ಅನ್ಯೋನ್ಯತೆಯನ್ನೂ ಸಾಧಿಸುವ ಸಾಧನಾಪಥಕ್ಕೆ ಪ್ರೇಮ ಮೊದಲಸೋಪಾನ. ಅದರ ಮೂಲಕವೇ ಸಕಲ ಜೀವರಾಶಿಯಲ್ಲಿ ನನ್ನನ್ನೂ, ನನ್ನಲ್ಲಿ ಸಕಲಜೀವರಾಶಿಯನ್ನೂ ಕಾಣುವ, ಏಕರೂಪತೆ ಪಡೆಯುವ ಮಹತ್ಸಾಧನೆ ಆದೀತು. ಮಹತ್ಸಾಧನೆಯ ಈ ಮಾತನ್ನು ವೇದಾಂತ, ಬುದ್ಧರಂಥವರಷ್ಟೇ ಹೇಳುತ್ತಿದ್ದರು. ಎಂದರೆ ಆಧ್ಯಾತ್ಮವಾದಿ ಧರ್ಮಪುರುಷರಷ್ಟೇ ಹೇಳುತ್ತಿದ್ದರು. ಇಡೀ ಮಾನವ ಜಾತಿ ಒಂದು ಮತ್ತು ಅವಿಭಾಜ್ಯವೆಂದು ಅಂಥವರ ಉಪದೇಶಗಳಿಂದ ಕೇಳಲು ಸಿಗುತ್ತಿತ್ತು, ತಿಳಿಯಲು ಸಾಧ್ಯವಾಯಿತು. ಆದರೆ ಈಗ ವಿಜ್ಞಾನವೂ ಇದೇ ಭಾಷೆಯಲ್ಲಿ ಮಾತನಾಡುತ್ತಿದೆ. ಇದೇ ದಿಶೆಯಲ್ಲಿ ತನ್ನ ಪ್ರಯೋಗ ಮತ್ತು ಚಿಂತನೆ ನಡೆಸುತ್ತಿದೆ. ತಾನು ಮಾಡಿದ ಪ್ರಯೋಗ ಮತ್ತು ನಿರೀಕ್ಷಣೆಗಳಿಂದ ದೊರೆತ ನಿಷ್ಕರ್ಷೆಗಳನ್ನು ಲೋಕದ ಮುಂದೆ ಸಾರಿ ಹೇಳುತ್ತಿದೆ. ಆ ನಿಷ್ಕರ್ಷೆಗಳನ್ನು ನೋಡಿದಾಗ ಆಧ್ಯಾತ್ಮಿಕ ಮತ್ತು ವೈಜ್ಞಾನಿಕ ಚಿಂತನೆಗಳೆರಡೂ ಒಂದೇ ಬಿಂದುವಿನಲ್ಲಿ., ಸಂಗಮಸ್ಥಾನದಲ್ಲಿ ಬಂದು ಸೇರುವ ಆಶ್ಚರ್ಯಕಾರಕ ಮತ್ತು ರೋಮಾಂಚಕ ಪರಿಣಾಮ ಮತ್ತು ಬೆಳವಣಿಗೆಯನ್ನು ಕಾಣುತ್ತಿದ್ದೇವೆ. ಆತ್ಮಜ್ಞಾನ-ವಿಜ್ಞಾನಗಳ ಸಮನ್ವಯವಾಗುತ್ತಿರುವ ಅದ್ಭುತ ದರ್ಶನ ಆಗುತ್ತಿದೆ. ಈ ಸಮನ್ವಯದ ಮೂರು ಉದಾಹರಣೆಗಳನ್ನು ತೆಗೆದುಕೊಳ್ಳಬಹುದು.

ಮೊದಲು ಮಾನವನತಳಿವಿಜ್ಞಾನದ ಎರಡಂಶಗಳನ್ನು ತೆಗೆದುಕೊಳ್ಳುವುದು ಸೂಕ್ತವಾಗಿದ್ದೀತು. ತಳಿ ವಿಜ್ಞಾನಿಗಳ ಇತ್ತೀಚಿನ ಪ್ರಕಟಣೆಯ ಪ್ರಕಾರ ಅನುವಂಶಿಕ ಸಂಕೇತ ಭಾಷೆಯನ್ನೂ ಅನುಕ್ರಮಿಕ ಸಂಕೇತ ವ್ಯವಸ್ಥೆಯನ್ನೂ ಶೇ ೯೯.೯೯ ರಷ್ಟು ಪೂರ್ಣಕರಾರುವಕ್ಕಾಗಿ ತಯಾರಿಸಲು ಸಾಧ್ಯವಾಗಿದೆ. ಕೇವಲ ೨೪ ಕ್ರೋಮಸೋಮ್‌ಗಳೊಳಗೆ ಮಾನವ ಜಿನೋಮ್ ಮೂರು ದ್ವಿಶತಕೋಟಿ ಜೋಡಿ ಡಿ.ಎನ್‌ಎ. ರಾಸಾಯನಿಕ ದ್ರವ್ಯಗಳು ಸಂಯೋಜಿಸಲ್ಪಟ್ಟಿವೆ. ಶರೀರದ ಬೆಳವಣಿಗೆ,

ವಿಕಾಸ ಕಾರ್ಯನಿರ್ವಹಣೆ, ಮತ್ತು ಮುಪ್ಪು ಈ ಎಲ್ಲ ಹಂತಗಳನ್ನು ನಿಯಂತ್ರಿಸುವ ಜೀವಸತ್ವ ಜೀನುಗಳು ಈ ರಾಸಾಯನಿಕ ದ್ರವ್ಯಗಳ ಜೋಡಿಗಳ ನಿರ್ದಿಷ್ಟ ಅನುಕ್ರಮಣಿಕೆಗಳಲ್ಲಿ ರಚಿಸಲ್ಪಟ್ಟಿರುತ್ತವೆ. ನ್ಯೂಕ್ಲೇಯಿಕ್ ಆಮ್ಲದ ನ್ಯೂಕ್ಲಿಯೊಟೈಡ್ ಅನುಕ್ರಮ ಮತ್ತು ಪ್ರೋಟೀನ್ ನಲ್ಲಿಯ ಅಮೀನೊ ಆಮ್ಲಗಳ ಅನುಕ್ರಮಕ್ಕೂ ಇರುವ ಸಂಭಂದವನ್ನು ಸೂಚಿಸುವ ಸಂಕೇತವ್ಯವಸ್ಥೆ. ಈ ಅನುಕ್ರಮಣಿಕೆಗಳಲ್ಲಿ ಕಿಂಚಿತ್ ಬದಲಾವಣೆ ತೋರಿಬಂದರೂ ಸಾಕು. ಆ ಬದಲಾವಣೆ ರೋಗಕ್ಕೆ ಕಾರಣವಾಗುತ್ತದೆ ಎಂದು ಅಂತರರಾಷ್ಟ್ರೀಯ ವಿಜ್ಞಾನಿಗಳ ಸಮೂಹ ಪ್ರಕಟಣೆಯಲ್ಲಿ ತಿಳಿಸಿದೆ. ಇದನ್ನು ಓದಿದಾಗ ವರ ಕವಿ ಅಂಬಿಕಾ ತನಯದತ್ತರ ಸುಪ್ರಸಿದ್ಧ ರಚನೆಯ ಪಂಕ್ತಿಗಳನ್ನು ಗುಣ ಗುಣಿಸುವಂತಾಯಿತು.

ಸ–ರಸ ಜನನ
ವಿ–ರಸ ಮರಣ
ಸಮ–ರಸವೇ ಜೀವನ.

ಇವನ್ನು ಗುಣಗುಣಿಸುತ್ತಾ ಚಿಂತನೆಯ ಚಕ್ರವೂ ಉರುಳುತ್ತಾ ಸಾಗಿತು. ಈ ರಚನೆಯ ಶಬ್ದಾರ್ಥಸ್ಥೂಲಾರ್ಥ, ಭಾವಾರ್ಥ ಮತ್ತು ಗೂಢಾರ್ಥಗಳನ್ನು ಕುರಿತು ಯೋಚಿಸಿದರೆ ಈ ಎಲ್ಲ ದೃಷ್ಟಿಯಿಂದ ಮೇಲಿನ ಪಂಕ್ತಿ ನಿಜವೆಂದು ವಿಜ್ಞಾನ ತೋರಿಸಿ ಕೊಡುತ್ತಿದೆ. ಜೀನ್‌ಗಳೊಳಗಣ ಡಿ.ಎನ್.ಎ ರಾಸಾಯನಿಕ ದ್ರವ್ಯಗಳ ಜೋಡಿ ಅನುಕ್ರಮಣಿಕೆಗಳಲ್ಲಿ ಕಂಡುಬಂದ ಕಿಂಚಿತ್ ವ್ಯತ್ಯಾಸ ರೋಗಕ್ಕೆ ಕಾರಣವಾಗುತ್ತದೆ. ಪೂರ್ಣ ವ್ಯತ್ಯಾಸ (ವಿ–ರಸ) ಮರಣಕ್ಕೂ ಸಮನಾದ ಅನುಕ್ರಮಣಿಕೆಗಳು (=ಸಮರಸ) ಜೀವನಕ್ಕೂ ಕಾರಣವಾಗುತ್ತದೆ. ವ್ಯಕ್ತಿ ವ್ಯಕ್ತಿಯಲ್ಲಿ ಈ ಸಮರಸತೆ, ತಾನಾಗಿಯೇ ನೆಲೆಸಿರುವುದನ್ನು ಹಿಗ್ಗಿಸಿ ಸಾಮುದಾಯಿಕ, ಸಾಮಾಜಿಕ ಗುಣ–ಲಕ್ಷಣವನ್ನಾಗಿ ಮಾಡುವುದು ಸಾಧ್ಯ ಮತ್ತು ಸಾಮಾಜಿಕ ಸಾಮರಸ್ಯ ಮಾನವೀಯ ಸಂಬಂಧಗಳ ಸಾಮರಸ್ಯಕ್ಕೆ ಬುನಾದಿಯಾಗಬಲ್ಲದು. ಕೊಟ್ಟ ಕೊನೆಯಲ್ಲಿ ವ್ಯಕ್ತಿಗನ್ವಯಿಸುವುದು, ವ್ಯಕ್ತಿಯಿಂದಾಗಬಲ್ಲದ್ದು ಮತ್ತು ವ್ಯಕ್ತಿಗಳಲ್ಲಿ ನೆಲೆಸಬಲ್ಲದ್ದು ಸಮೂಹಕ್ಕೂ ಅನ್ವಯಿಸಬಲ್ಲದು, ಸಮಷ್ಟಿಯಿಂದಲೂ ಆದೀತು; ಸಮೂಹದಲ್ಲೂ ನೆಲೆಸಬಲ್ಲದು.

ಇನ್ನು ಎರಡನೆ ಉದಾಹರಣೆ. ಮಾನವನ ಅನುವಂಶಿಕ ಸಂಕೇತ ಭಾಷೆ ಸಕ್ರಿಯವಾಗಿ ವಿಕಸಿಸುತ್ತಾ ಬರುತ್ತಿದೆ. ಮೊದಲ ಕರಡು ಪ್ರತಿ ೨೦೦೧ನೇ ವರ್ಷದಲ್ಲಿ ಪ್ರಕಟವಾಯಿತು. ಅದು ಹೊರ ತಂದ ನಿಷ್ಕರ್ಷೆಯ ಪ್ರಕಾರ ಮಾನವನ ಶರೀರ ೩೦,೦೦೦ ವಿಶಿಷ್ಟ ಜೀನುಗಳಿಂದಾಗಿವೆ. ಇವುಗಳಲ್ಲಿ ಶೇ ೯೯.೯ ಅಂಕ ಜೀನ್‌ಗಳು ಎಲ್ಲ ಮನುಷ್ಯರಲ್ಲಿಯೂ ಒಂದೇ ಆಗಿರುತವೆ. ಇದರ ಅಂತರಾರ್ಥವೇನು? ಅಂತರಾರ್ಥಕನಿಷ್ಠ ಎರಡು. ಒಂದು, ಇದು ಮಾನವನ ಏಕತೆಯನ್ನು ಶ್ರುತಪಡಿಸುತ್ತದೆ. ಸಕಲ ಮಾನವರು ಒಂದೇ. ನಮ್ಮ ಆಧ್ಯಾತ್ಮಿಕ ನಿಷ್ಠೆ ಏನೆನ್ನುತ್ತದೆ? ಸಕಲಮಾನವರಷ್ಟೇ ಏಕೆ? ಜೀವಮಾತ್ರ ಏಕ ಮತ್ತು ಪವಿತ್ರ ಎನ್ನುತ್ತದೆ. ಆದ್ದರಿಂದ ಅವಿಭಾಜ್ಯವೂ ಆಯಿತು. ಎರಡು, ಶುದ್ಧ ಆರ್ಯನ್‌ರಕ್ತ, ಶುದ್ಧ ದ್ರವಿಡಿಯನ್ ರಕ್ತ, ಶುದ್ಧ ಆಂಗ್ಲೊ–ಕ್ಯಾಕ್ಸ್‌ಜನ್ ರಕ್ತ, ಶುದ್ಧ ಸೆಮಿಟಿಕ್‌ರಕ್ತ ಇತ್ಯಾದಿಯೆಲ್ಲ ಶುದ್ಧಸುಳ್ಳು. ಮೂರು, ಮೈಬಣ್ಣದ ಆಧಾರದ ಮೇಲಿನ ವರ್ಣೀಯ ಶ್ರೇಷ್ಠತೆ, ಅಥವಾ ವರ್ಣಪಾರಮ್ಯ ಎಂಬುವೆಲ್ಲ ಕೇವಲ ಮಿಥ್ಯಾವಾದ ಮತ್ತು ಆಧಾರ ರಹಿತಹೇಳಿಕೆಗಳು. ಹೀಗೆನ್ನಲು ಇದು ಮೊಟ್ಟ ಮೊದಲ ವೈಜ್ಞಾನಿಕ ಸಾಕ್ಷಾಧಾರ ಎಂದು ವಿಜ್ಞಾನಿಗಳ ಕೂಟ ಹೇಳುತ್ತದೆ. ವೈಜ್ಞಾನಿಕ ಆಧಾರದಿಂದ ವರ್ಣೀಯ

ಶ್ರೇಷ್ಠತೆ, ಅನುವಂಶಿಕ ಶ್ರೇಷ್ಠತೆ ಇತ್ಯಾದಿ ವಾದ, ಪ್ರತಿಪಾದನೆಗಳನ್ನು ನಿರಾಕರಿಸಬಹುದು. ಅಂದರೆ ಇಂಥ ಪ್ರತಿಪಾದನೆಗಳಿಗೆ ಶಾಸ್ತ್ರಾಧಾರವೂ ಇಲ್ಲ, ವೈಜ್ಞಾನಿಕ ಆಧಾರವೂ ಇಲ್ಲವೆಂದಾಯಿತು. ಇದು ಬಹುಗಹನ ಮತ್ತು ದೂರಗಾಮಿ ಪರಿಣಾಮಗಳಿಗಾಸ್ಪದ ಕೊಡುವ ಹೇಳಿಕೆಯೆಂದು ನನ್ನ ಮತ.-(ಆಧಾರ:೩.೩.೦೩) ೧೬.೪.೦೩ ವೈಜ್ಞಾನಿಕ ಪ್ರಕಟಣೆಗಳು:ಹಿಂದೂ)

ಇಲ್ಲಿ ಇದೇ ವಿಚಾರ ಸರಣಿಯಲ್ಲಿ ಕೂಡಿಬರುವ ಇನ್ನೆರಡು ವೈಜ್ಞಾನಿಕ ಸಂಗತಿಗಳನ್ನೂ ಗಮನಿಸುವುದು ಇಳ್ಳೆಯದು. ಒಂದನೆಯದಾಗಿ, ಇಲಿ ಮತ್ತು ಮನುಷ್ಯರಲ್ಲಿ, ಸರಿಸುಮಾರು ಇಬ್ಬರಲ್ಲೂ ೧೦೧೯ ವಿಶಿಷ್ಟ ಜೀನ್‌ಗಳು ಸಾಮಾನ್ಯಾಂಶವಾಗಿ ಕಂಡು ಬಂದಿವೆ. ಈ ಇಬ್ಬರಲ್ಲೂ ಭಿನ್ನವಾದ ಸುಮಾರು ೫೦೦ ಜೀನ್ಸ್‌ಗಳನ್ನು ಬಿಟ್ಟರೆ, ಉಳಿದಂತೆ ೨೫ ರಿಂದ ೩೦ ಸಾವಿರ ಜೀನ್‌ಗಳು ಒಂದೇ ತರಹದವು-(೧೩-೭-೦೩ ರಲ್ಲಿ ಹಿಂದೂ ಪ್ರಕಟಣೆ.) ಅದೆ ರೀತಿ ಇದೇ ತಿಂಗಳಲ್ಲಿ ಪ್ರಕಟವಾದ ನಾಯಿಯ ಜೀನೋಮ್ ನೋಡಿದರೆ ನಾಯಿಯ ಡಿ.ಎನ್.ಎ. ಯ ನೀಲನಕ್ಷೆಯಲ್ಲಿ ಮಾನವನ ಭಾರಿ ಪ್ರಭಾವ ಕಂಡು ಬಂದಿದೆ ಒಂದು ಕಾಲಕ್ಕೆ ತೋಳನ ವಂಶಜ ಈ ನಾಯಿ ಮಾನವನ ಪ್ರಭಾವಕ್ಕೆ ಸಿಕ್ಕು ಅವನ ಆಯ್ಕೆಯ (ಬುದ್ಧಿವಂತಿಕೆಗೆ) ಸಿಕ್ಕು ಇಂದು ಅದು ತನ್ನ ತೋಳತನವನ್ನು ಕಳೆದುಕೊಂಡು ಅವಸ್ಥಾಂತರ ಹೊಂದಿದೆ. ಕೆಲಮಟ್ಟಿಗೆ ಅದರ ರೂಪಾಂತರವೂ ಆಗಿ ಹೋಗಿದೆ. ಇದೇ ನೂ ಜೀವ ರಾಶಿಯ ಏಕತೆಗೂ ಅನ್ಯೋನ್ಯತೆಗೂ ವೈಜ್ಞಾನಿಕ ಸಾಕ್ಷ್ಯಾಧಾರವಲ್ಲವೆ?(೯-೧೨-೦೫ ರ ಎ.ಎಫ್.ಪಿ ಪ್ರಕಟಣೆ) ಇನ್ನೂ ಹೆಚ್ಚು ಸಾಕ್ಷ್ಯಾಧಾರಗಳ ಮುಂದೆ ದೊರಕುವುವು. ಇದು ಸಾಧ್ಯವಾದುದು ಮನುಷ್ಯ ಮತ್ತು ನಾಯಿಗಳಿಬ್ಬರೂ ಪರಸ್ಪರ ಪ್ರಯೋಜಕತೆಯ ಸಂಬಂಧ ಬೆಳೆಸಿ ವಾಸಿಸುವಸ್ಥಾನ ಮತ್ತು ತಿನ್ನುವ ಆಹಾರದ ಮೂಲಗಳನ್ನು ಪರಸ್ಪರ ಹಂಚಿಕೊಳ್ಳುತ್ತಾ ನಡೆದ ಧೀರ್ಘಕಾಲಾ ನಂತರದ ಕಾರಣ ನಾಯಿಯ ಈ ವಿಕಾಸ ಸಾಧ್ಯವಾಯಿತು, ಈ ಅವಸ್ಥಾಂತರ ಮತ್ತು ಪರಿವರ್ತನೆ ಸಂಭವಿಸಿತು ಎನ್ನುತ್ತಾರೆ ವೈಜ್ಞಾನಿಕರು.


ಆಶ್ಚರ್ಯಕಾರಕ ಮತ್ತು ನೇರೆ ಸಾಕ್ಷ್ಯಾಧಾರ ಸಹಿತ ಹೇಳಬಹುದಾದ, ನಂಬಲು ಕಷ್ಟವೆನಿಸುವ, ಆದರೆ ನಂಬಲೇಬೇಕಾಗಿರುವ ವೈಜ್ಞಾನಿಕ ಸತ್ಯವೆಂದರೆ ಅದು ಮಾನವನ ಏಕತೆ. ಇನ್ನೂ ಮುಂದೆ ಹೋಗಿ, ಸಕಲ ಜೀವರಾಶಿಯ ಏಕತೆ, ಶಾಶ್ವತ ನೀತಿತತ್ವವಾದ ಪ್ರೇಮ ಮತ್ತು ಅಹಿಂಸೆಯ ಆಧಾರದ ಮೇಲೆ ರೂಪಗೊಳ್ಳುತ್ತಾ ,ಹೆಚ್ಚು ವಿಕಸಿಸುತ್ತಾ, ಹೆಚ್ಚು ವಿಸ್ತರಿಸುತ್ತಾ ಸಾಗಿದೆ. ಇದು ಮೌನವಾಗಿ ಗದ್ದಲ-ಗಲಾಟೆಯಿಲ್ಲದ, ಸಡಗರ-ಸಂಭ್ರಮ-ಕಾಣದ ವಿಕಾಸ ಮತ್ತು ಪರಿವರ್ತನೆಯ ಶಕ್ತಿಯ ಶುಭ ಪರಿಣಾಮ.

ನಾವು ಮಾಡಬೇಕಾದುದಿಷ್ಟೇ. ಅದಕ್ಕೆ ಅನುಕೂಲರಾಗಿ ನಡೆದುಕೊಳ್ಳುವುದು, ಮಾನವನ ಏಕತೆಯಲ್ಲಿ ವಿಶ್ವಾಸವಿಡುವುದು. ಅದಕ್ಕೆ ತಕ್ಕ ಆಚರಣೆಗಳನ್ನು ರೂಪಿಸಿಕೊಳ್ಳುವುದು ಮುಂತಾದವು. ರಾಜನೀತಿ, ಅರ್ಥನೀತಿ, ಸಮಾಜನೀತಿ ಇತ್ಯಾದಿ ನಿಯಮಿತ ಶಾಸ್ತ್ರಗಳನ್ನು ಮೇಲಿನ ನಂಬಿಕೆಗೆ ತಕ್ಕಂತೆ ರೂಪಿಸಿಕೊಳ್ಳುವುದು. ಇತ್ತ ಕಡೆ ನಮ್ಮ ಗಮನ ಹರಿಯುವಂತಾಗಲಿ. ಮಾನವನಿರ್ಮಿತ ಎಲ್ಲ ಸಕುಂಚಿತ ಭೇದ-ಪ್ರಭೇದಗಳಿಂದ ಮೇಲೆದ್ದು ವ್ಯವಹರಿಸುವ ಉನ್ನತ ಸಂಸ್ಕಾರವನ್ನು ರೂಢಿಸಿಕೊಳ್ಳುವುದೇ ನಿಜವಾದ ಮಾನವೀಯ ಪರಿವರ್ತನೆ ಎನಿಸೀತು.

* * *

ಜನಪದ ನಿಲಯದ ಅಂತರಂಗದಲ್ಲಿ..................೨೭

"ನಾವು ಸತ್ಯವನ್ನು ನುಡಿಯುತ್ತೇವೆ; ಆದರೆ ಸತ್ಯ ಗೊತ್ತಾದಾಗ ನಮಗೆ ಹುಚ್ಚು ಹಿಡಿಯುತ್ತದೆ" *-ಅಲ್ಡಾಸ್ ಹಕ್ಸ್ಲಿ*




ನಾನು ಜನಪದ ಸೇವಾ ಟ್ರಸ್ಟ್‌ನ್ನು ಸ್ಥಾಪಿಸುವ ಸಮಯದಲ್ಲಿ ನನ್ನ ಮನಸ್ಸಿನೊಳಗೆ ಸಮಾಜ ಸೇವೆಗೆ ಅವಕಾಶವನ್ನು ಕಲ್ಪಿಸಿಕೊಳ್ಳಬೇಕೆಂಬ ಸಂದರ್ಭದಲ್ಲಿ ಇನ್ನೊಂದು ಅವಕಾಶದ ಬಗ್ಗೆ ಯೋಚನೆ ಬಂದಿತು. ಆ ಸಮಯದಲ್ಲಿ ನನಗೆ ಗೋಪಾಲಕೃಷ್ಣಗೋಖಲೆಯವರಿಂದ ಸ್ಥಾಪಿತಗೊಂಡಿದ್ದ "ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಹೆಸರು ಜ್ಞಾಪಕಕ್ಕೆ ಬಂತು. ಈ ಸೊಸೈಟಿಯ ಸದಸ್ಯನಾಗಿ ರಚನಾತ್ಮಕಕಾರ್ಯಕ್ಕೆ ಏಕೆ ತೊಡಗಬಾರದು ಎಂಬ ವಿಚಾರ ನನ್ನ ಮನಸ್ಸಿಗೆ ಬಂತು. ಇದಕ್ಕೆ ಕಾರಣ ನಾನು ಗಾಂಧೀಜಿಯವರ ಜೀವನಚರಿತ್ರೆಯನ್ನು ಓದುತ್ತಿದ್ದಾಗ ಈ ಸಂಸ್ಥೆಯನ್ನು ಕುರಿತು ಗಾಂಧೀಜಿಯವರು ಬರೆದಿದ್ದ ವಿಚಾರಗಳು ನನ್ನ ಮನಸ್ಸಿನಲ್ಲಿ ಉಳಿದಿದ್ದವು. ಆದರೆ ಈ ಸಂಸ್ಥೆಯ ಸದಸ್ಯನಾಗುವುದು ಬಹಳ ಕಷ್ಟವೆಂದು ನನಗೆ ತಿಳಿದಿತ್ತು. ಆದರೂ ಸಹ ಪ್ರಯತ್ನಮಾಡಿ ನೋಡಲು ಆಲೋಚಿಸಿದೆ. ಅದಕ್ಕಾಗಿ ಪುಣೆಯಲ್ಲಿಯ ಆ ಸಂಸ್ಥೆಗೆ ಪತ್ರ ಬರೆದು ಸದಸ್ಯತ್ವದ ಅರ್ಜಿ ನಮೂನೆಯನ್ನು ತರಿಸಿಕೊಂಡೆ ಮತ್ತು ಅದನ್ನು ಭರ್ತಿಮಾಡಿ ಕಳುಹಿಸಿದೆ. ಗೋಪಾಲಕೃಷ್ಣಗೋಖಲೆಯವರು ಸರ್ವೆಂಟ್ಸ್ ಆಫ್ ಇಂಡಿಯಾ ಸೋಸೈಟಿಯನ್ನು ೧೯೦೫ರಲ್ಲಿ ಸ್ಥಾಪಿಸಿದ್ದರು. ಆ ಸಂಸ್ಥೆಯನ್ನು ಸ್ಥಾಪಿಸಿದ ಸಮಯದಲ್ಲಿ ಇದ್ದಂಥ ಪ್ರಮುಖ ಸದಸ್ಯರಲ್ಲಿ ಶ್ರೀ ಡಿ.ಕೆ ದೇವದರ್ ಎಂಬುವವರು ಸಹ ಒಬ್ಬರು. ನಾನು ಆ ಸಂಸ್ಥೆಗೆ ಅರ್ಜಿ ಬೇಕೆಂದು ಪತ್ರ ಬರೆದಾಗ ಶ್ರೀ ಡಿ.ಕೆ. ದೇವದರ್ ಅವರು ಮುಖ್ಯಸ್ಥರಾಗಿದ್ದರು ಅವರ ಹಸ್ತಾಕ್ಷರವಿದ್ದ ಪತ್ರದೊಂದಿಗೆ ನನಗೆ ಅರ್ಜಿ ನಮೂನೆ ತಲುಪಿತು. ಅವರು ಕೇಳಿದ್ದ ವಿವರಗಳನ್ನು ಕೊಟ್ಟಿದ್ದೆ ಆದರೆ ಆ ಸಂಸ್ಥೆಯ ನಿಯಮಾವಳಿಗಳನ್ನು ಓದಿದ ನನಗೆ ಸದಸ್ಯತ್ವ ಸಿಗುವುದು ಅಸಾಧ್ಯವೆಂದೆನಿಸಿತ್ತು. ಆ ಸಂಸ್ಥೆಗೆ ಸದಸ್ಯರಾಗಿರಬೇಕಾದವರು ಪದವೀಧರರಾಗಿರಬೇಕಾಗಿತ್ತು. ನಾನು ಪದವೀಧರನಲ್ಲ. ನಾನು ಅರ್ಜಿ ಕಳುಹಿಸಿದ ನಂತರ ತಿಂಗಳುಗಳಾದರೂ ಯಾವ ಉತ್ತರವೂ ಬರಲಿಲ್ಲ ಇದರ ಅರ್ಥ ನನಗಾಯಿತು. ಆದ್ದರಿಂದ ನಾನು ಸ್ಥಾಪಿಸಿದ ಜನಪದ ಸೇವಾ ಟ್ರಸ್ಟಿನ ಮೂಲಕವೆ ರಚನಾತ್ಮಕ ಕಾರ್ಯಮಾಡಲು ತೀರ್ಮಾನಿಸಿದೆ. ಸರ್ವೆಂಟ್ಸ್ ಆಫ್ ಇಂಡಿಯಾ ಸೋಸೈಟಿಯ ಸದಸ್ಯರಲ್ಲಿ ಯಾವ ಸಾಮರ್ಥ್ಯವನ್ನು ಆ ಸಂಸ್ಥೆಯವರು ಅಪೇಕ್ಷಿಸಿದರೊ ಅಂಥ ಸಾಮರ್ಥ್ಯವನ್ನು ನನ್ನಲ್ಲಿ ಮೈಗೂಡಿಸಿಕೊಂಡು ರಚನಾತ್ಮಕ ಕಾರ್ಯವನ್ನು ಮಾಡಬೇಕೆಂದು ಯೋಚಿಸಿದೆ. ತನ್ಮೂಲಕ

ಗೋಪಾಲಕೃಷ್ಣಗೋಖಲೆ ಮತ್ತು ಗಾಂಧೀಜಿಯವರಿಬ್ಬರಿಗೂ ಏಕಕಾಲಕ್ಕೆ ಸಮಾಜ ಸೇವೆಯ ಮೂಲಕ ನನ್ನ ಒಂದು ಅಲ್ಪ ಕಾಣಿಕೆಯನ್ನು ಸಲ್ಲಿಸುವ ಪ್ರಯತ್ನ ಮಾಡಲು ತಿರ್ಮಾನಿಸಿದೆ. ಇವೆಲ್ಲದರ ಪರಿಣಾಮವಾಗಿಯೆ ಜನಪದ ಸೇವಾ ಟ್ರಸ್ಟ್ ಕಾಲ ಕಳೆದಂತೆ ಅರಳುತ್ತಾ ಬಂತು. ಗಾಂಧೀಜಿಯವರ ರಚನಾತ್ಮಕ ಕಾರ್ಯದಲ್ಲಿ ಅಂತ್ಯೋದಯಕ್ಕೆ ಅಂದರೆ ಸಮಾಜದಲ್ಲಿ ಅತ್ಯಂತ ಹಿಂದುಳಿದವರ ಉದಯವನ್ನು ಮಾಡುವುದು ಪ್ರಮುಖ ಕಾರ್ಯವಾಗಿತ್ತು. ಗೋಖಲೆಯವರ ಸರ್ವೆಂಟ್ಸ್ ಆಫ್ ಇಂಡಿಯಾದ ಉದ್ದೇಶಗಳಲ್ಲಿ ದೇಶದ ಸಾರ್ವಜನಿಕ ಜೀವನವನ್ನು ಪರಿಶುದ್ಧಗೊಳಿಸಿ ಆಧ್ಯಾತ್ಮದ ನೆಲೆಯ ಮೇಲೆ ಸಂಘಟಿಸಬೇಕೆಂಬುದಾಗಿತ್ತು. ಈ ಮಾತು ಗಾಂಧೀಜಿಯವರ ಸರ್ವೋದಯ ವಿಚಾರದಲ್ಲಿ ಸೇರಿಯೆ ಇತ್ತು. ಆದ್ದರಿಂದ ಜನಪದ ಸೇವಾ ಟ್ರಸ್ಟನ್ನು ಈ ಎರಡೂ ಉದ್ದೇಶಗಳಿಗೆ ಹೊಂದಿಸಬೇಕೆಂಬುದು ನನ್ನ ಉದ್ದೇಶಿತ ಪ್ರಯತ್ನವಾಗಿತ್ತು.

ಗಾಂಧೀಜಿಯವರು ತಮ್ಮ ಸಾರ್ವಜನಿಕ ಜೀವನವನ್ನು ದಕ್ಷಿಣಾ ಆಫ್ರಿಕಾದಲ್ಲಿ ಪ್ರಾರಂಭಿಸಿದಾಗ ತಮ್ಮ ಜೀವನ ನಿರ್ವಹಣೆಗೆ ವಕೀಲಿವೃತ್ತಿಯನ್ನು ಅವಲಂಬಿಸಿದ್ದರು. ಮುಂದೆ ತಮ್ಮ ಜೀವನವನ್ನು ಅತ್ಯಂತ ಸರಳಗೊಳಿಸಿ ಸಾರ್ವಜನಿಕರ ಮೇಲೆ ತಮ್ಮ ಸೇವಾಖರ್ಚಿನ ಭಾರ ಬೀಳದಂತೆ ಎಚ್ಚರಿಕೆ ವಹಿಸಿದರು. ಗೋಖಲೆಯವರು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಕಾರ್ಯಕರ್ತರಿಗೆ ಆಗಿನ ಕಾಲದಲ್ಲಿ ಕೇವಲ ತಿಂಗಳಿಗೆ ೫೦ ರೂಪಾಯಿಯನ್ನು ಕೊಟ್ಟು ಸರಳ ಜೀವನ ನಡೆಸುತ್ತಾ ಸಮಾಜಕಾರ್ಯವನ್ನು ಮಾಡಬೇಕೆಂಬ ನಿಯಮ ಹಾಕಿದ್ದರು. ಒಂದು ವೇಳೆ ಹಣ ಮಿಕ್ಕಲ್ಲಿ ಅದನ್ನು ಮಾತ್ರ ಸಂಸ್ಥೆಗೆ ಹಿಂದಿರುಗಿಸಬೇಕು. ಈ ಎರಡು ವಿಚಾರಗಳು ಸಹ ನನ್ನ ಮನದಲ್ಲಿ ಪ್ರಬಲವಾಗಿ ಕೆಲಸ ಮಾಡುತ್ತಿದ್ದವು. ನಾನು ಜಯಪ್ರಕಾಶ್‌ನಾರಾಯಣರನ್ನು ಬಿಟ್ಟು ಸ್ವತಂತ್ರವಾಗಿ ಕೆಲಸಮಾಡಲು ಮೇಲುಕೋಟೆಗೆ ಬಂದಾಗ ಒಂದು ವರ್ಷದ ಮಟ್ಟಿಗೆ ೫೦ ರೂಪಾಯಿಗಳ ಧನಸಹಾಯವನ್ನು ಕೇಳಿದ್ದೆ ಮತ್ತು ಒಂದು ವರ್ಷದೊಳಗಾಗಿ ಈ ಸಹಾಯದಿಂದಲೂ ಬಿಡುಗಡೆ ಹೊಂದುವುದಾಗಿ ಹೇಳಿದ್ದೆ ಇವೆಲ್ಲ ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನನ್ನ ಜೀವನ ನಡೆಸಲು ನಿಶ್ಚಯಿಸಿದೆ. ಇದೇನೂ ಕಷ್ಟದ ಕೆಲಸವಾಗಿರಲಿಲ್ಲ. ಏಕೆಂದರೆ ಬಾಲ್ಯದಿಂದಲೂ ನನ್ನಲ್ಲಿ ಯಾವುದೇ ಅತಿ ಆಸೆಗಳು ಇರಲಿಲ್ಲ ಅಥವಾ ಬೇರೆಯವರ ಜೀವನದ ಅನುಕರಣೆಯ ಸ್ವಭಾವವೂ ಇರಲಿಲ್ಲ. ಇದ್ದುದರಲ್ಲಿ ತೃಪ್ತಿಪಟ್ಟುಕೊಂಡು ಹೋಗುವ ಸ್ವಭಾವ ರಕ್ತಗತವಾಗಿತ್ತು. ಹೀಗಾಗಿ ಜನಪದ ಸೇವಾ ಟ್ರಸ್ಟಿನ ಸ್ಥಾಪನೆಯ ನಂತರವೂ ನನ್ನ ದೃಷ್ಟಿಕೋನದಲ್ಲಾಗಲಿ, ನನ್ನ ಜೀವನದಲ್ಲಾಗಲಿ ಯಾವುದೇ ಬದಲಾವಣೆಯಾಗಲಿಲ್ಲ ನನ್ನ ಈ ಸ್ವಭಾವಗಳು ಟ್ರಸ್ಟಿನ ಕಾರ್ಯಕ್ರಮಗಳ ಮೇಲೆ ಸಹಜವಾಗಿಯೆ ಪರಿಣಾಮವನ್ನು ಬೀರಿದವು. ಅದರಲ್ಲಿ ಮುಖ್ಯವಾದ ಪರಿಣಾಮ ಸರ್ಕಾರದ ಸಹಾಯವನ್ನು ಪಡೆಯಬಾರದೆಂಬುದು ಮತ್ತು ಇರುವ ಪರಿಸ್ಥಿತಿಯಲ್ಲಿಯೆ ಉತ್ತಮವಾದ ಗುಣಮಟ್ಟದ ಸೇವೆಯು ನಡೆಯಬೇಕೆಂಬುದು. ಆದ್ದರಿಂದ ಟ್ರಸ್ಟಿನ ಸಾರ್ವಜನಿಕ ಸೇವಾಕಾರ್ಯಕ್ರಮದ ಮೊದಲ ಹೆಜ್ಜೆಯಾಗಿ ಮಕ್ಕಳ ಸೇವೆ, ಅಂಗವಿಕಲರ ಸೇವೆ ಮತ್ತು ಮಹಿಳೆಯರ ಸೇವೆಯನ್ನು ಕೈಗೆತ್ತಿಕೊಂಡೆ. ಇವೆಲ್ಲವು ಅಂತ್ಯೋದಯದ ವಿಚಾರದಿಂದ ಪ್ರೇರಿತವಾದಂತವು. . . . . . .

(ಮುಂದುವರಿಯುವುದು)

ಜನಪದ ಸೇವಾ ಟ್ರಸ್ಟ್ ಅಂಗಳ



೧೯೬೩ರಲ್ಲಿ ಗ್ರಾಮೀಣಪ್ರದೇಶದಲ್ಲಿರುವ ಅಂಗವಿಕಲರಿಗಾಗಿ 'ಕರುಣಾಗೃಹ' ಎಂಬ ಹೆಸರಿನಲ್ಲಿ ವಸತಿಗೃಹವನ್ನು ಪ್ರಾರಂಭಿಸಲಾಯಿತು. ವಸತಿಗೃಹದಲ್ಲಿದ್ದುಕೊಂಡು ವಿದ್ಯಾಭ್ಯಾಸ ಮಾಡುವಂತೆ ಅವಕಾಶವನ್ನು ಕಲ್ಪಿಸಿಕೊಡಲಾಯಿತು. ಕರುಣಾಗೃಹದಲ್ಲಿ ೩೫ ರಿಂದ ೪೦ ಮಕ್ಕಳವರೆಗೂ ಅಂಗವಿಕಲಮಕ್ಕಳಿದ್ದ ಕಾಲವೊಂದಿತ್ತು. ಈಗ ಪೋಲಿಯೊ ವಿರುದ್ಧ ದೇಶದಾದ್ಯಂತ ನಡೆಯುತ್ತಿರುವ ಆಂದೋಲನದ ಫಲವಾಗಿ ಇಂದು ಸಮಾಜದಲ್ಲಿ ಅಂಗವಿಕಲ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಇದೊಂದು ಅದ್ಭುತ ಮತ್ತು ದೇವರು ಮೆಚ್ಚುವಂಥ ಸಾಧನೆ. ಅಲ್ಲದೆ ಅಲ್ಲಲ್ಲಿ ಅಂಗವಿಕಲರಿಗಾಗಿ ಸಂಸ್ಥೆಗಳು ಸೇವೆಯನ್ನು ಮಾಡುತ್ತಿವೆ. ಓಡಾಡುವುದಕ್ಕಾಗಿ ಸರ್ಕಾರ ಬಸ್‌ಪಾಸ್‌ಗಳನ್ನು ಕೊಟ್ಟಿದೆ. ಹತ್ತಿರದಲ್ಲಿಯೆ ಶಾಲಾ-ಕಾಲೇಜುಗಳಿವೆ. ೧೯೬೩ರಲ್ಲಿದ್ದ ಪರಿಸ್ಥಿತಿ ೨೦೦೬ರಲ್ಲಿ ಇಲ್ಲ. ಬಹಳಷ್ಟು ಸುಧಾರಣೆಯಾಗಿದೆ. ಆದ್ದರಿಂದ ಟ್ರಸ್ಟಿನ ಕರುಣಾಗೃಹದಲ್ಲಿ ಸಹಜವಾಗಿಯೆ ಅಂಗವಿಕಲ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ. ಆದರೂ ಸಹ ಈಗಲೂ ೭ ಜನ ಅಂಗವಿಕಲರು ಕರುಣಾಗೃಹದಲ್ಲಿದ್ದಾರೆ. ಇವರೊಂದಿಗೆ ಗ್ರಾಮೀಣ ಪ್ರದೇಶದಲ್ಲಿಯ ಬಡ ಹಾಗೂ ಹಿಂದುಳಿದ ವರ್ಗಗಳ ಮಕ್ಕಳನ್ನು ಸಹ ಸೇರಿಸಿಕೊಳ್ಳಲಾಗುತ್ತಿದೆ. ಇವರೆಲ್ಲರ ಸಂಖ್ಯೆ ೨೦ ಆಗುತ್ತದೆ. ಇವರಿಗೆ ಔಪಚಾರಿಕ ಶಿಕ್ಷಣದ ಜೊತೆಗೆ ಜೀವನದ ಮೌಲ್ಯಗಳನ್ನು ಸಹ ಪರಿಚಯಿಸಿಕೊಡಲಾಗುತ್ತಿದೆ. ಇವರೆಲ್ಲರೂ ಜನಪದ ಮುಕ್ತ ವಿದ್ಯಾಲಯದಲ್ಲಿ ಓದುತ್ತಾರೆ. ಈ ವಿದ್ಯಾಲಯದಲ್ಲಿ ಮಕ್ಕಳಿಗೆ ಯಾವುದೇ ವಿಧವಾದ ಭಯದ ವಾತಾವರಣವಿಲ್ಲ ಎಲ್ಲರೂ ಸಂತೋಷದಿಂದ ವಿದ್ಯಾಭ್ಯಾಸ ಮಾಡುತ್ತಾ ಒಳ್ಳೆಯ ರೂಢಿಗಳನ್ನು ಬೆಳಸಿಕೊಳ್ಳುತ್ತಾ ಕೆಲವು ಉಪಯುಕ್ತ ಉದ್ಯೋಗಗಳನ್ನು ಕಲಿಯುತ್ತಾ ಬೆಳೆಯುತ್ತಿದ್ದಾರೆ. ಹಿರಿಯರ ಮಾರ್ಗದರ್ಶನವಿದೆ.ಒಳ್ಳೆಯ ಅಧ್ಯಾಪಕರ ಸಹಾಯವಿದೆ. ಬೆಳಿಗ್ಗೆ ೬ ಗಂಟೆಯಿಂದ ರಾತ್ರಿ ೯ ಗಂಟೆಯವರೆಗೆ ಮುಕ್ತ ವಿದ್ಯಾಲಯದ ವಿದ್ಯಾರ್ಥಿಗಳು ಒಂದಲ್ಲ ಒಂದು ಉಪಯುಕ್ತಕರವಾದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಆವರಣದ ಸ್ವಚ್ಛತೆಯನ್ನು ಪಾಲಿಸಿಕೊಂಡು ಬರುತ್ತಾರೆ. ತಮ್ಮ ದೈನಂದಿನ ಉಪಯೋಗದ ಪದಾರ್ಥಗಳನ್ನು ಓರಣವಾಗಿಟ್ಟುಕೊಳ್ಳುತ್ತಾರೆ. ಬೆಳಿಗ್ಗೆ ಮತ್ತು ಸಂಜೆ ವಿನೋಬಾ ವಿರಚಿತ ಸರ್ವ ಧರ್ಮದ ಪ್ರಾರ್ಥನೆ ಮಾಡುತ್ತಾರೆ. ಸಾಮೂಹಿಕ ಭೋಜನದ ಸಮಯದಲ್ಲಿ ವಿಷ್ಣುಸಹಸ್ರನಾಮದ ಕೆಲವು ಶ್ಲೋಕಗಳನ್ನು ಹೇಳುತ್ತಾರೆ. "ಮಂಕುತಿಮ್ಮನ ಕಗ್ಗ"ದ ಕೆಲ ನುಡಿಗಳನ್ನು ಹೇಳುತ್ತಾರೆ. ಪ್ರಾರ್ಥನೆಯ ಮುನ್ನ ಹತ್ತುನಿಮಿಷ ಧ್ಯಾನ ಮಾಡುತ್ತಾರೆ. ಶುಕ್ರವಾರ ದಿನದಂದು ಮಾತು ಕಡಿಮೆ ಮಾಡಿ ಕೆಲಸ ಹೆಚ್ಚು ಮಾಡುವ ಅಭ್ಯಾಸ ಮಾಡುತ್ತಾರೆ. ಇಂಥ ಇನ್ನೂ ಹಲವಾರು ಶೈಕ್ಷಣಿಕ ಮಹತ್ವದ ಕಾರ್ಯಕ್ರಮಗಳು ಜನಪದ ಮುಕ್ತ ವಿದ್ಯಾಲಯದ ಭಾಗವಾಗಿದೆ.

ಆಸಕ್ತರು ಜನಪದ ಸೇವಾ ಟ್ರಸ್ಟ್‌ನ್ನು ಸಂಪರ್ಕಿಸಬಹುದು.

(ಇದು ೨೦೦೬ ಜನವರಿ ಮಾಹೆಗೆ ಸಂಬಂಧಿಸಿದ ವಿಷಯ)

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೆ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಅದರಲ್ಲಿಯೂ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಹ ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ನಿಮ್ಮನ್ನು ಜನಪದ ವಿಚಾರದ ಲೇಖಕರ ಬಳಗಕ್ಕೆ ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಸರ್ವೋದಯ ದೃಷ್ಟಿಯಿಂದ ವಿಶ್ಲೇಷಿಸಿ ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ. ಲೇಖನವು ಜನಪದ ವಿಚಾರದ ನಾಲ್ಕೈದು ಪುಟಗಳಿಗೆ ಸೀಮಿತವಾಗಿರುವಂತೆ ಇರಬೇಕೇಂಬುದಷ್ಟೆ ನಮ್ಮ ವಿನಂತಿ. ಈ ಲೇಖಕರ ಬಳಗಕ್ಕೆ ಸೇರಬಹುದಾದಂಥ ಸ್ನೇಹಿತರಿದ್ದರೆ ಅವರ ವಿಳಾಸವನ್ನು ತಿಳಿಸಬೇಕಾಗಿ ವಿನಂತಿ. ನೀವು ನಮ್ಮ ಈ ಕೋರಿಕೆಯನ್ನು ಮನ್ನಿಸುತ್ತೀರೆಂದು ನಂಬಿದ್ದೇವೆ ಮತ್ತು ನಿಮ್ಮ ಉತ್ತರವನ್ನು ನಿರೀಕ್ಷಿಸುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ *(–ಸಂಪಾದಕರು)*

KA-SKMND-470-2003-05
Regd. no. KAR/KAN/2000/3820

ತೆರೆದ-ಅಂಚೆ



MELKOTE

TO,

ಶ್ರೀ. ಶ್ರೀ ಮೌ ಕಟ್ಟಪ್ಪ
ನಂ.2, 13 ನೇ ಕ್ರಾಸ್
ನಾಲುರಸ್ತೆ
ಕುವೆಂಪು ನಗರ
ಮೈಸೂರು - 23.

Sender

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ®. Melkote. Dist- mandya – 571431
Phone : 08236 – 298754 e-mail : janapada@yahoo.com